# ಪ್ರಚಾರ ಕೆಲಸ ಕುರಿತಾದ ಚೀನಾ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾಡಿದ' ಭಾಷಣ

ಮಾರ್ಚ್ 12, 1957 ಮಾವೋ ತ್ಸೆ ತುಂಗ್

ಸಂಗಾತಿಗಳೆ, ನಮ್ಮ ಸಮ್ಮೇಳನವು[1] ಬಹಳ ಚೆನ್ನಾಗಿ ನಡೆದಿದೆ. ಸಮ್ಮೇಳನದ ಅವಧಿಯಲ್ಲಿ ಅನೇಕ ಪ್ರಶ್ನೆಗಳನ್ನು ಎತ್ತಲಾಗಿದೆ ಮತ್ತು ಅನೇಕ ವಿಚಾರಗಳ ಬಗ್ಗೆ ನಾವು ತಿಳಿದುಕೊಂಡಿದ್ದೇವೆ. ಸಂಗಾತಿಗಳು ಚರ್ಚಿಸುತ್ತಲಿದ್ದ ಪ್ರಶ್ನೆಗಳ ಬಗ್ಗೆ ನಾನೀಗ ಕೆಲವು ವಿಚಾರಗಳನ್ನು ಪ್ರಸ್ತಾಪಿಸುವೆ.

ನಾವು ಮಹತ್ತರ ಸಾಮಾಜಿಕ ಬದಲಾವಣೆಯ ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ. ಚೀನಾ ಸಮಾಜವು ಬಹು ದೀರ್ಘಕಾಲದಿಂದ ಮಹತ್ತರ ಬದಲಾವಣೆಗಳನ್ನು ಕಾಣುತ್ತಲೇ ಇದೆ. ಜಪಾನ್ ವಿರೋಧಿ ಪ್ರತಿರೋಧ ಯುದ್ಧವು ಮಹತ್ತರ ಬದಲಾವಣೆಯ ಒಂದು ಕಾಲಘಟ್ಟವಾದರೆ 'ವಿಮೋಚನಾ ಯುದ್ಧ'ವು ಮತ್ತೊಂದು ಕಾಲಘಟ್ಟ. ಆದರೆ ಪ್ರಸ್ತುತದ ಬದಲಾವಣೆಯ ಸ್ವಭಾವದಲ್ಲಿ ಮೊದಲಿನವುಗಳಿಗಿಂತ ಬಹಳಷ್ಟು ಗಹನವಾದದ್ದು. ನಾವೀಗ ಸಮಾಜವಾದವನ್ನು ಕಟ್ಟುತ್ತಿದ್ದೇವೆ. ನೂರಾರು ಮಿಲಿಯನ್ ಜನರು ಸಮಾಜವಾದಿ ಪರಿವರ್ತನೆಗಾಗಿನ ಆಂದೋಲನದಲ್ಲಿ ಪಾಲ್ಗೊಂಡಿದ್ದಾರೆ. ದೇಶದಾದ್ಯಂತ ವರ್ಗ ಸಂಬಂಧಗಳು ಬದಲಾಗುತ್ತಿವೆ. ಕೃಷಿ ಮತ್ತು ಕರಕುಶಲ ರಂಗಗಳಲ್ಲಿ ಪುಟ್ಟ ಬಂಡವಾಳಶಾಹಿಯೂ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ರಂಗಗಳಲ್ಲಿ ಬಂಡವಾಳಶಾಹಿ ಈ ಎರಡೂ ಬದಲಾವಣೆಗೊಳಗಾಗಿವೆ. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯು ಬದಲಾಗಿದೆ; ಬಿಡಿಬಿಡಿ ಆರ್ಥಿಕತೆಯು ಸಮಷ್ಟಿ ಆರ್ಥಿಕತೆಯಾಗಿ ಪರಿವರ್ತನೆಗೊಂಡಿದೆ ಮತ್ತು ಬಂಡವಾಳಶಾಹಿ ಖಾಸಗಿ ಮಾಲೀಕತ್ವವು ಸಮಾಜವಾದಿ ಸಾರ್ವಜನಿಕ ಮಾಲೀಕತ್ವವಾಗಿ ಪರಿವರ್ತನೆಗೊಳ್ಳುತ್ತಿದೆ. ಅಷ್ಟು ದೊಡ್ಡ ಪ್ರಮಾಣದ ಬದಲಾವಣೆಗಳು ಜನರ ಮನಸ್ಸಿನಲ್ಲಿ ಖಂಡಿತವಾಗಿ ಪ್ರತಿಬಿಂಬಿತವಾಗುತ್ತವೆ. **ಮನುಷ್ಯನ ಸಾಮಾಜಿಕ ಇರುವಿಕೆಯು ಆತನ ಪ್ರಜ್ಞೆಯನ್ನು ನಿರ್ಧರಿಸುತ್ತದೆ.** ನಮ್ಮ ಸಮಾಜದಲ್ಲಿನ ಮಹತ್ತರ ಬದಲಾವಣೆಗಳಿಗೆ ವಿಭಿನ್ನ ವರ್ಗಗಳ, ಸ್ತರದ ಮತ್ತು ಸಾಮಾಜಿಕ ಗುಂಪುಗಳ ಜನರು ವಿಭಿನ್ನವಾಗಿ ಪ್ರತಿಕ್ರಿಯಿಸುತ್ತಾರೆ. ಜನಸಮೂಹಗಳು ಬಹು ಉತ್ಸುಕತೆಯಿಂದ ಅವುಗಳನ್ನು ಬೆಂಬಲಿಸುತ್ತವೆ. ಏಕೆಂದರೆ, ಚೀನಾಕ್ಕೆ ಸಮಾಜವಾದವೊಂದೇ ದಾರಿ ಎಂದು ಬದುಕೇ ದೃಢಪಡಿಸಿದೆ. ಹಳೆಯ ಸಾಮಾಜಿಕ ವ್ಯವಸ್ಥೆಯನ್ನು ಮೂಲೋತ್ಪಾಟನೆ ಮಾಡಿ ಹೊಸದೊಂದನ್ನು, ಸಮಾಜವಾದದ ವ್ಯವಸ್ಥೆಯನ್ನು ಸ್ಥಾಪಿಸುವುದು ಒಂದು ಮಹಾನ್ ಸಂಘರ್ಷ. ಸಾಮಾಜಿಕ ವ್ಯವಸ್ಥೆಯಲ್ಲಿನ ಹಾಗೂ ಮನುಷ್ಯನ ಪರಸ್ಪರ ಸಂಬಂಧಗಳಲ್ಲಿನ ಒಂದು ಮಹಾನ್ ಬದಲಾವಣೆ. ಪರಿಸ್ಥಿತಿಯು ಮೂಲಭೂತವಾಗಿ ಗಟ್ಟಿಯಾಗಿದೆ ಎಂದೇ ಹೇಳಬೇಕು. ಆದರೆ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಇದೀಗ ತಾನೆ ಸ್ಥಾಪಿಸಲಾಗಿದೆ ಹಾಗೂ ಅದರ ಸದೃಢೀಕರಣಕ್ಕೆ ಸಮಯಾವಕಾಶ ಬೇಕು. ಹೊಸ ವ್ಯವಸ್ಥೆಯನ್ನು ಸ್ಥಾಪಿಸಿದ ಕ್ಷಣದಲ್ಲೇ ಅದನ್ನು ಸಂಪೂರ್ಣವಾಗಿ ಸದೃಢೀಕರಣಗೊಳಿಸಿಬಿಡಬಹುದು ಎಂದು ಭಾವಿಸಲೇಬಾರದು. ಏಕೆಂದರೆ, ಅದು ಅಸಾಧ್ಯ. ಅದನ್ನು ಹಂತಹಂತವಾಗಿ ಸದೃಢೀಕರಣಗೊಳಿಸಬೇಕಾಗುತ್ತದೆ. ಆದರೆ ಅಂತಿಮ ಸದೃಢೀಕರಣವನ್ನು ಸಾಧಿಸುವುದಕ್ಕೆ ದೇಶದಲ್ಲಿ ಸಮಾಜವಾದಿ ಕೈಗಾರೀಕರಣವನ್ನು ಉಂಟುಮಾಡಿ ಆರ್ಥಿಕ ರಂಗದಲ್ಲಿ ಸಮಾಜವಾದಿ ಕ್ರಾಂತಿಯನ್ನು ಪಟ್ಟುಬಿಡದೆ ಮುಂದುವರಿಸುವುದು ಮಾತ್ರವಲ್ಲ, ಜೊತೆಗೆ ರಾಜಕೀಯ ಮತ್ತು ಸೈದ್ಧಾಂತಿಕ ರಂಗಗಳಲ್ಲೂ ನಿರಂತರ ಮತ್ತು ಪ್ರಯಾಸಕರ ಸಮಾಜವಾದಿ ಕ್ರಾಂತಿಕಾರಿ ಸಂಘರ್ಷಗಳನ್ನು ಮತ್ತು ಸಮಾಜವಾದಿ ಶಿಕ್ಷಣವನ್ನು ಮುಂದುವರಿಸುವುದೂ ಅವಶ್ಯಕ. ಅಷ್ಟೇ ಅಲ್ಲದೆ, ವಿವಿಧ ಸಹಾಯಕ ಅಂತರರಾಷ್ಟ್ರೀಯ ಅಂಶಗಳೂ ಬೇಕಾಗುತ್ತವೆ. ಚೀನಾದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಸದೃಢೀಕರಿಸುವುದಕ್ಕಾಗಿನ ಸಂಘರ್ಷ, ಸಮಾಜವಾದ ಜಯಶಾಲಿಯಾಗುತ್ತೋ ಅಥವಾ ಬಂಡವಾಳವಾದ ಜಯಶಾಲಿಯಾಗುತ್ತೋ ಎಂಬುದನ್ನು ತೀರ್ಮಾನಿಸುವುದಕ್ಕಾಗಿನ ಸಂಘರ್ಷ ಇನ್ನೂ ದೀರ್ಘ ಚಾರಿತ್ರಿಕ ಅವಧಿಯನ್ನು ತೆಗೆದುಕೊಳ್ಳುತ್ತದೆ. ಆದರೆ, ಹೊಸ ಸಮಾಜವಾದಿ ವ್ಯವಸ್ಥೆಯನ್ನು ಪ್ರಶ್ನಾತೀತವಾಗಿ ಸದೃಢೀಕರಿಸಲಾಗುತ್ತದೆ ಎಂಬುದನ್ನು ನಾವೆಲ್ಲರೂ ಮನಗಾಣಬೇಕು. ಆಧುನಿಕ ಕೈಗಾರಿಕೆ, ಆಧುನಿಕ ಕೃಷಿ ಹಾಗೂ ಆಧುನಿಕ ವಿಜ್ಞಾನ ಮತ್ತು ಸಂಸ್ಕೃತಿಗಳನ್ನೊಳಗೊಂಡ ಸಮಾಜವಾದಿ ರಾಜ್ಯವನ್ನು ನಾವು ಖಂಡಿತವಾಗಿಯೂ ಕಟ್ಟಬಲ್ಲೆವು. ಇದು ನಾನು ಹೇಳಬಯಸಿದ ಮೊದಲ ಅಂಶ.

ಎರಡನೆಯದಾಗಿ, ಬುದ್ಧಿಜೀವಿಗಳಿಗೆ ಸಂಬಂಧಿಸಿದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳೋಣ. ಚೀನಾದಲ್ಲಿರುವ ಬುದ್ಧಿಜೀವಿಗಳ ಸಂಖ್ಯೆಯ ಬಗ್ಗೆ ಯಾವುದೇ ನಿಖರ ಅಂಕಿಅಂಶಗಳು ಲಭ್ಯವಿಲ್ಲ. ಚೀನಾದಲ್ಲಿ ಉನ್ನತ ಮತ್ತು ಸಾಮಾನ್ಯ ಬುದ್ಧಿಜೀವಿಗಳನ್ನೂ ಒಳಗೊಂಡಂತೆ ಎಲ್ಲಾ ರೀತಿಯ ಸುಮಾರು ಐದು ಮಿಲಿಯನ್ ಬುದ್ಧಿಜೀವಿಗಳಿದ್ದಾರೆಂದು ಅಂದಾಜಿಸಲಾಗಿದೆ. ಈ ಐದು ಮಿಲಿಯನ್‌ನಲ್ಲಿ ಭಾರಿ ಸಂಖ್ಯೆಯವರು ದೇಶಪ್ರೇಮಿಗಳಾಗಿದ್ದಾರೆ. ನಮ್ಮ 'ಜನತಾ ಗಣರಾಜ್ಯ'ವನ್ನು ಪ್ರೀತಿಸುತ್ತಾರೆ ಹಾಗೂ ಜನರಿಗೂ ಮತ್ತು ಸಮಾಜವಾದಿ ರಾಜ್ಯಕ್ಕೂ ಸೇವೆ ಸಲ್ಲಿಸಬಯಸುತ್ತಾರೆ. ಒಂದು ಚಿಕ್ಕ ಸಂಖ್ಯೆಯವರು ಮಾತ್ರ ಸಮಾಜವಾದವನ್ನು ಪೂರ್ತಿ ಇಷ್ಟಪಡುವುದಿಲ್ಲ ಮತ್ತು ಸಂತೋಷವಾಗಿ ಇಲ್ಲ. ಅವರಿಗೆ ಸಮಾಜವಾದದ ಬಗ್ಗೆ ಇನ್ನೂ ಸಂಶಯವಿದೆ. ಆದರೆ, ಸಾಮ್ರಾಜ್ಯವಾದವನ್ನು ಎದುರುಗೊಳ್ಳುವ ಸಂಭವ ಬಂದಾಗ ಅವರು ದೇಶಪ್ರೇಮಿಗಳೇ. ನಮ್ಮ ರಾಜ್ಯದೊಂದಿಗೆ ಹಗೆತನ ಹೊಂದಿರುವ ಬುದ್ಧಿಜೀವಿಗಳ ಸಂಖ್ಯೆ ಬಹಳ ಕಡಿಮೆ. ಅವರು ನಮ್ಮ ಪ್ರಭುತ್ವವನ್ನು ಅಂದರೆ, ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಇಷ್ಟಪಡುವುದಿಲ್ಲ. ಅವರು ಹಳೆಯ ಸಮಾಜಕ್ಕಾಗಿ ಹಾತೊರೆಯುತ್ತಾರೆ. ಯಾವಾಗಲಾದರೂ ಒಂದು ಅವಕಾಶ ಸಿಕ್ಕಿತೆಂದರೆ ಸಾಕು ಅವರು ಗಲಭೆಗಳನ್ನು ಎಬ್ಬಿಸಿ ಕಮ್ಯೂನಿಸ್ಟ್ ಪಕ್ಷವನ್ನು ಕಿತ್ತೊಗೆದು ಹಳೆಯ ಚೀನಾವನ್ನು ಪುನರ್‌ಸ್ಥಾಪಿಸುವುದಕ್ಕೆ ಪ್ರಯತ್ನಿಸುತ್ತಾರೆ. ಕಾರ್ಮಿಕ ವರ್ಗದ ಹಾದಿ ಮತ್ತು **ಬಂಡವಾಳಶಾಹಿ ಹಾದಿ**ಗಳಲ್ಲಿ ಹಾಗೂ ಸಮಾಜವಾದಿ ಹಾದಿ ಮತ್ತು **ಬಂಡವಾಳವಾದಿ ಹಾದಿ**ಗಳಲ್ಲಿ ಈ ಜನರು ಗಟ್ಟಿಯಾಗಿ ಎರಡನೆಯದನ್ನೇ ಅನುಸರಿಸಲು ಆಯ್ದುಕೊಳ್ಳುತ್ತಾರೆ. ನಿಜ ಹೇಳಬೇಕೆಂದರೆ ಈ ಹಾದಿ ಅಸಾಧ್ಯ, ಮತ್ತು ಅದರಿಂದಾಗಿಯೇ ಅವರು ಸಾಮ್ರಾಜ್ಯವಾದ, ಊಳಿಗಮಾನ್ಯತೆ ಮತ್ತು ಅಧಿಕಾರ-ಬಂಡವಾಳವಾದಗಳಿಗೆ ಶರಣಾಗುವುದಕ್ಕೆ ಸಿದ್ಧರಾಗಿದ್ದಾರೆ. ಅಂತಹ ಜನರನ್ನು ರಾಜಕೀಯ ವಲಯಗಳಲ್ಲಿ ಹಾಗೂ ಕೈಗಾರಿಕಾ ಮತ್ತು ವಾಣಿಜ್ಯ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಹಾಗೂ ಧಾರ್ಮಿಕ ವಲಯಗಳಲ್ಲಿ ಕಾಣಬಹುದಾಗಿದ್ದು ಅವರು ತೀರಾ ಪ್ರತಿಗಾಮಿಗಳಾಗಿದ್ದಾರೆ. ಅವರು ಐದು ಮಿಲಿಯನ್ ಬುದ್ಧಿಜೀವಿಗಳಲ್ಲಿ ಕೇವಲ ಶೇಕಡಾ 1 ಅಥವಾ 2 ಅಥವಾ 3ರಷ್ಟು ಇದ್ದಾರೆ. ಒಟ್ಟು ಐದು ಮಿಲಿಯನ್ ಬುದ್ಧಿಜೀವಿಗಳಲ್ಲಿ ಭಾರಿ ಸಂಖ್ಯೆಯವರು ಅಥವಾ ಶೇಕಡಾ 90ಕ್ಕಿಂತ ಹೆಚ್ಚಿನವರು ಸಮಾಜವಾದಿ ವ್ಯವಸ್ಥೆಯನ್ನು ಬೇರೆಬೇರೆ ಪ್ರಮಾಣಗಳಲ್ಲಿ ಬೆಂಬಲಿಸುತ್ತಾರೆ. ಅವರಲ್ಲಿನ ಅನೇಕರಿಗೆ ಸಮಾಜವಾದದ ಅಡಿಯಲ್ಲಿ ಹೇಗೆ ನಿಭಾಯಿಸಬೇಕು ಮತ್ತು ಹೇಗೆ ಪರಿಹರಿಸಬೇಕು ಎಂಬುದರ ಬಗ್ಗೆ ಸ್ಪಷ್ಟನೆ ಇಲ್ಲ.

ಮಾರ್ಕ್ಸ್‌ವಾದದೆಡೆಗಿನ ಐದು ಮಿಲಿಯನ್ ಬುದ್ಧಿಜೀವಿಗಳ ಮನೋಭಾವಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಕಮ್ಯೂನಿಸ್ಟರನ್ನು ಮತ್ತು ಸಹಾನುಭೂತಿಪರರನ್ನು ಒಳಗೊಂಡಿರುವ ಶೇಕಡ 10ರಷ್ಟು ಜನ ಸಾಪೇಕ್ಷವಾಗಿ ಮಾರ್ಕ್ಸ್‌ವಾದದೊಂದಿಗೆ ನಿಕಟವಾಗಿದ್ದು, ದೃಢ ನಿಲುವನ್ನು, ಅಂದರೆ ಕಾರ್ಮಿಕ ವರ್ಗದ ನಿಲುವನ್ನು ತಾಳುತ್ತಾರೆ ಎಂದು ಹೇಳಬಹುದು. ಒಟ್ಟು ಐದು ಮಿಲಿಯನ್‌ನಲ್ಲಿ ಅವರು ಅಲ್ಪಸಂಖ್ಯಾತರು. ಆದರೆ ಅವರು ಅದರ ನಾಭಿ ಮತ್ತು ಬಲಿಷ್ಠ ಶಕ್ತಿ,. ಬಹುತೇಕರಿಗೆ ಮಾರ್ಕ್ಸ್‌ವಾದವನ್ನು ಕಲಿಯಬೇಕೆಂಬ ಇಚ್ಛೆಯಿದ್ದು ಈಗಾಗಲೇ ಒಂದಿಷ್ಟನ್ನು ಕಲಿತಿದ್ದಾರೆ. ಆದರೆ ಅವರಿನ್ನೂ ಅದರೊಂದಿಗೆ ನಿಕಟವಾಗಿಲ್ಲ. ಅವರಲ್ಲಿನ ಕೆಲವರಿಗೆ ಇನ್ನೂ ಅನುಮಾನಗಳಿವೆ. ಅವರ ನಿಲುವಿನ್ನೂ ಗಟ್ಟಿಯಾಗಿಲ್ಲ. ಹಾಗೂ ಒತ್ತಡದ ಕ್ಷಣಗಳಲ್ಲಿ ಅವರು ಹೊಯ್ದಾಡುತ್ತಾರೆ. ಐದು ಮಿಲಿಯನ್‌ನಲ್ಲಿ ಬಹುಸಂಖ್ಯಾತರಾಗಿರುವ ಈ ಬುದ್ಧಿಜೀವಿಗಳ ವಿಭಾಗವು ಇನ್ನೂ ಮಧ್ಯಸ್ಥ ಸ್ಥಿತಿಯಲ್ಲಿದೆ. ಮಾರ್ಕ್ಸ್‌ವಾದವನ್ನು ಬಲವಾಗಿ ವಿರೋಧಿಸುವ ಅಥವಾ ಅದರೊಂದಿಗೆ ಹಗೆತನವಿರುವ ಸಂಖ್ಯೆ ತುಂಬಾ ಚಿಕ್ಕದು. ಕೆಲವು ಜನರು ಬಹಿರಂಗವಾಗಿ ಹೇಳುವುದಿಲ್ಲವಾದರೂ ನಿಜವಾಗಿಯೂ ಮಾರ್ಕ್ಸ್‌ವಾದವನ್ನು ಒಪ್ಪುವುದಿಲ್ಲ. ಮುಂಬರುವ ಬಹಳ ಸಮಯದವರೆಗೆ ಈ ರೀತಿಯ ಜನ ಇರುತ್ತಾರೆ ಮತ್ತು ನಾವು ಅವರಿಗೆ ಒಪ್ಪದಿರುವುದಕ್ಕೆ ಅವಕಾಶ ಕೊಡಬೇಕು. ಕೆಲವು ಭಾವನಾವಾದಿಗಳನ್ನೆ ಉದಾಹರಣೆಗಾಗಿ ತೆಗೆದುಕೊಳ್ಳಿ. ಅವರು ಸಮಾಜವಾದದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ಒಪ್ಪಿಕೊಳ್ಳಬಹುದು. ಆದರೆ ಮಾರ್ಕ್ಸ್‌ವಾದಿ ಪ್ರಪಂಚ ದೃಷ್ಟಿಕೋನವನ್ನು ಒಪ್ಪಿಕೊಳ್ಳುವುದಿಲ್ಲ. ಧಾರ್ಮಿಕ ವಲಯಗಳಲ್ಲಿರುವ ದೇಶಪ್ರೇಮಿ ಜನರ ವಿಚಾರದಲ್ಲೂ ಇದು ಸತ್ಯ. ಅವರು ಆಸ್ತಿಕರು, ನಾವು ನಾಸ್ತಿಕರು. ಮಾರ್ಕ್ಸ್‌ವಾದಿ ಪ್ರಪಂಚ ದೃಷ್ಟಿಕೋನವನ್ನು ಒಪ್ಪಿಕೊಳ್ಳಬೇಕೆಂದು ನಾವು ಅವರನ್ನು ಒತ್ತಾಯಪಡಿಸಲು ಸಾಧ್ಯವಿಲ್ಲ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಮಾರ್ಕ್ಸ್‌ವಾದದೆಡೆಗಿನ ಐದು ಮಿಲಿಯನ್ ಬುದ್ಧಿಜೀವಿಗಳ ಮನೋಭಾವವನ್ನು ಈ ಕೆಳಗಿನಂತೆ ಕ್ರೋಢೀಕರಿಸಬಹುದು. ಮಾರ್ಕ್ಸ್‌ವಾದವನ್ನು ಬೆಂಬಲಿಸುವ ಮತ್ತು ಅದರೊಂದಿಗೆ ಸಾಪೇಕ್ಷವಾಗಿ ನಿಕಟವಾಗಿರುವವರು ಅಲ್ಪಸಂಖ್ಯಾತರಾಗಿದ್ದಾರೆ ಮತ್ತು ಅದನ್ನು ವಿರೋಧಿಸುವವರೂ ಸಹ ಅಲ್ಪಸಂಖ್ಯಾತರಾಗಿದ್ದಾರೆ. ಬಹುಸಂಖ್ಯಾತರು ಮಾರ್ಕ್ಸ್‌ವಾದವನ್ನು ಬೆಂಬಲಿಸುತ್ತಾರೆ. ಆದರೆ ಅದರೊಂದಿಗೆ ನಿಕಟವಾಗಿಲ್ಲ. ಹಾಗೂ ಬೇರೆಬೇರೆ ಪ್ರಮಾಣಗಳಲ್ಲಿ ಅದನ್ನು ಬೆಂಬಲಿಸುತ್ತಾರೆ. ಇಲ್ಲಿ ತೆಗೆದುಕೊಳ್ಳುವ ನಿಲುವುಗಳೂ ಕೂಡ ಮೂರು ಬಗೆಯವುಗಳು - ದೃಢ, ಹೊಯ್ದಾಡುವ ಮತ್ತು ವೈರತ್ವಪೂರಿತ. ಈ ಪರಿಸ್ಥಿತಿಯು ಒಪ್ಪಿಕೊಂಡಿರುವಂತೆ ಮುಂಬರುವ ದೀರ್ಘಕಾಲದತನಕ ಮುಂದುವರಿಯುತ್ತದೆ. ಈ ಸತ್ಯವನ್ನು ಗುರುತಿಸುವಲ್ಲಿ ನಾವು ವಿಫಲರಾದರೆ, ಇತರರಿಂದ ಭಾರಿ ಪ್ರಮಾಣವನ್ನು ಕೇಳುತ್ತಾ ಅದೇ ಸಮಯದಲ್ಲಿ ನಮಗಾಗಿ ತೀರ ಚಿಕ್ಕ ಕರ್ತವ್ಯವನ್ನು ಹಾಕಿಕೊಳ್ಳುತ್ತೇವೆ. ಪ್ರಚಾರ ಕೆಲಸದಲ್ಲಿರುವ ನಮ್ಮ ಸಂಗಾತಿಗಳಿಗೆ ಮಾರ್ಕ್ಸ್‌ವಾದವನ್ನು ಎಲ್ಲೆಡೆ ಹಬ್ಬಿಸುವ ಕರ್ತವ್ಯವಿದೆ. ಇದನ್ನು ಕ್ರಮೇಣವಾಗಿ ಮಾಡಬೇಕಾಗುತ್ತದೆ. ಜನರು ಮನಃಪೂರ್ವಕವಾಗಿ ಅದನ್ನು ಒಪ್ಪಿಕೊಳ್ಳುವಂತೆ ಬಹಳ ಚೆನ್ನಾಗಿ ಮಾಡಬೇಕಾಗುತ್ತದೆ. ಮಾರ್ಕ್ಸ್‌ವಾದವನ್ನು ಒಪ್ಪಿಕೊಳ್ಳುವಂತೆ ಜನರನ್ನು ನಾವು ಒತ್ತಾಯಪಡಿಸಲು ಸಾಧ್ಯವಿಲ್ಲ. ಅವರನ್ನು ಕೇವಲ ಪ್ರೇರೇಪಿಸಬಹುದು. ಅನೇಕ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ತಕ್ಕಮಟ್ಟಿಗೆ ದೊಡ್ಡ ಸಂಖ್ಯೆಯ ನಮ್ಮ ಬುದ್ಧಿಜೀವಿಗಳು ಮಾರ್ಕ್ಸ್‌ವಾದವನ್ನು ಒಪ್ಪಿಕೊಂಡು, ತಮ್ಮ ನೈಜ ಕೆಲಸ ಮತ್ತು ಬದುಕಿನ ಮೂಲಕ, ವರ್ಗ ಸಂಘರ್ಷದ ಆಚರಣೆಯ, ಉತ್ಪಾದನೆಯ ಮತ್ತು ವೈಜ್ಞಾನಿಕ ಚಟುವಟಿಕೆಯ ಮೂಲಕ ಅದನ್ನು ತಕ್ಕಮಟ್ಟಿಗೆ ಉತ್ತಮವಾಗಿ ಗ್ರಹಿಸಿಕೊಂಡರೆ ಚೆನ್ನಾಗಿರುತ್ತದೆ. ಹೀಗಾಗಬೇಕೆಂದೇ ನಾವು ಆಶಿಸುತ್ತಿರುವುದು.

ಮೂರನೆಯದಾಗಿ, ಬುದ್ಧಿಜೀವಿಗಳನ್ನು ಪುನರ್‌ರೂಪಿಸುವ ಪ್ರಶ್ನೆಯಿದೆ. ನಮ್ಮದು ಸಾಂಸ್ಕೃತಿಕವಾಗಿ ಹಿಂದುಳಿದ ದೇಶ. ನಮ್ಮಂತಹ ವಿಶಾಲ ದೇಶವೊಂದಕ್ಕೆ ಐದು ಮಿಲಿಯನ್ ಬುದ್ಧಿಜೀವಿಗಳು ತೀರಾ ಕಡಿಮೆ. ಬುದ್ಧಿಜೀವಿಗಳಿಲ್ಲದೇ ನಮ್ಮ ಕೆಲಸವನ್ನು ಚೆನ್ನಾಗಿ ಮಾಡಲು ಸಾಧ್ಯವಿಲ್ಲ. ಇದರಿಂದಾಗಿ ನಾವು ಅವರೊಂದಿಗೆ ಐಕ್ಯಗೊಳ್ಳುವ ಕೆಲಸವನ್ನು ಬಹು ಸಮರ್ಪಕವಾಗಿ ಮಾಡಬೇಕು. ಸಮಾಜವಾದಿ ಸಮಾಜವು ಪ್ರಮುಖವಾಗಿ ಮೂರು ಬಗೆಯ ಜನಭಾಗಗಳನ್ನು ಒಳಗೊಂಡಿರುತ್ತದೆ. - ಕಾರ್ಮಿಕರು, ರೈತರು ಮತ್ತು ಬುದ್ಧಿಜೀವಿಗಳು. ಬುದ್ಧಿಜೀವಿಗಳು ಮಾನಸಿಕ ಕಾರ್ಮಿಕರು. ಅವರ ಕೆಲಸ ಜನರ ಸೇವೆಯಲ್ಲಿರುತ್ತದೆ. ಅಂದರೆ ಕಾರ್ಮಿಕರ ಮತ್ತು ರೈತರ ಸೇವೆಯಲ್ಲಿರುತ್ತದೆ. ಬಹುಸಂಖ್ಯಾತ ಬುದ್ಧಿಜೀವಿಗಳಿಗೆ ಸಂಬಂಧಪಟ್ಟು ಹೇಳುವುದಾದರೆ, ಅವರು ಹಳೆಯ ಚೀನಾಕ್ಕೆ ಸೇವೆ ಸಲ್ಲಿಸಿದಂತೆಯೇ ಹೊಸ ಚೀನಾಕ್ಕೂ ಸೇವೆ ಸಲ್ಲಿಸಬಲ್ಲರು. ಮತ್ತು ಬಂಡವಾಳಶಾಹಿಗೆ ಸೇವೆ ಸಲ್ಲಿಸಿದಂತೆಯೇ ಕಾರ್ಮಿಕ ವರ್ಗಕ್ಕೂ ಸೇವೆ ಸಲ್ಲಿಸಬಲ್ಲರು. ಬುದ್ಧಿಜೀವಿಗಳು ಹಳೆಯ ಚೀನಾಕ್ಕೆ ಸೇವೆ ಸಲ್ಲಿಸುವ ಸಂದರ್ಭದಲ್ಲಿ ಎಡ ಬಣ ಪ್ರತಿರೋಧಿಸಿತು. ಮಧ್ಯಸ್ಥ ಭಾಗ ಹೊಯ್ದಾಡುತ್ತಿತ್ತು. ಹಾಗೂ ಬಲ ಬಣ ಮಾತ್ರವೇ ದೃಢವಾಗಿತ್ತು. ಈಗ ಹೊಸ ಸಮಾಜಕ್ಕೆ ಸೇವೆ ಸಲ್ಲಿಸುವ ವಿಚಾರಕ್ಕೆ ಬರುವುದಾದರೆ, ಎಡ ಬಣ ದೃಢವಾಗಿರುತ್ತದೆ. ಮಧ್ಯಸ್ಥ ಭಾಗ ಹೊಯ್ದಾಡುತ್ತಿರುತ್ತದೆ (ಹೊಸ ಸಮಾಜದಲ್ಲಿನ ಈ ಹೊಯ್ದಾಟವು ಹಳೆಯ ಸಮಾಜದಲ್ಲಿನ ಹೊಯ್ದಾಟಕ್ಕಿಂತ ಭಿನ್ನವಾಗಿರುತ್ತದೆ). ಹಾಗೂ ಬಲ ಬಣ ಪ್ರತಿರೋಧಿಸುತ್ತದೆ. ಅಷ್ಟೇ ಅಲ್ಲದೆ ಬುದ್ಧಿಜೀವಿಗಳು, ಶಿಕ್ಷಕರು, ನಮ್ಮ ವೃತ್ತ ಪ್ರತ್ರಿಕೆಗಳು ದಿನನಿತ್ಯ ಜನರಿಗೆ ಶಿಕ್ಷಣ ನೀಡುತ್ತಿವೆ. ನಮ್ಮ ಬರಹಗಾರರು ಮತ್ತು ಕಲಾಕಾರರು, ವಿಜ್ಞಾನಿಗಳು ಮತ್ತು ತಂತ್ರಜ್ಞರು, ಪ್ರಾಧ್ಯಾಪಕರು ಮತ್ತು ಉಪಾಧ್ಯಾಯರು ಎಲ್ಲರೂ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಜನರಿಗೆ ಶಿಕ್ಷಣ ನೀಡುತ್ತಿದ್ದಾರೆ. ಶಿಕ್ಷಕರಾಗಿ ಮತ್ತು ಉಪಾಧ್ಯಾಯರಾಗಿ ಅವರೇ ಮೊದಲು ಶಿಕ್ಷಿತರಾಗಬೇಕು. ಸಾಮಾಜಿಕ ವ್ಯವಸ್ಥೆಯಲ್ಲಿನ ಮಹತ್ತರ ಬದಲಾವಣೆಯ ಪ್ರಸ್ತುತ ಕಾಲಘಟ್ಟದಲ್ಲಿ ಇದು ಇನ್ನೂ ಹೆಚ್ಚು ಅವಶ್ಯಕ. ಕಳೆದ ಕೆಲವು ವರ್ಷಗಳಲ್ಲಿ ಅವರಿಗೆ ಮಾರ್ಕ್ಸ್‌ವಾದಿ ಶಿಕ್ಷಣವಿದೆ. ಹಾಗೂ ಕೆಲವರು ಬಹಳ ಕಷ್ಟಪಟ್ಟು ಅಧ್ಯಯನ ಮಾಡಿ ಒಂದಿಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಆದರೆ, ಬಹುತೇಕರು ಬಂಡವಾಳಶಾಹಿ ಪ್ರಪಂಚ ದೃಷ್ಟಿಕೋನದ ಜಾಗದಲ್ಲಿ ಕಾರ್ಮಿಕ ವರ್ಗದ ಪ್ರಪಂಚ ದೃಷ್ಟಿಕೋನವನ್ನು ಹೊಂದುವ ಮೊದಲು ಇನ್ನೂ ದೀರ್ಘ ಹಾದಿ ಕ್ರಮಿಸಬೇಕಿದೆ. ಕೆಲವರು ಒಂದಿಷ್ಟು ಮಾರ್ಕ್ಸ್‌ವಾದಿ ಪುಸ್ತಕಗಳನ್ನು ಓದಿಕೊಂಡು ತಾವೇ ಪೂರ್ತಿ ತಿಳಿದುಕೊಂಡವರೆಂದು ಭಾವಿಸುತ್ತಾರೆ. ಆದರೆ ಅವರು ಓದಿಕೊಂಡದ್ದು ಒಳಹೊಕ್ಕಿಲ್ಲ. ಅವರ ಮನಸ್ಸುಗಳಲ್ಲಿ ಬೇರೂರಿಲ್ಲ. ಹಾಗಾಗಿ ಅದನ್ನು ಹೇಗೆ ಬಳಸಬೇಕೆಂಬುದು ಅವರಿಗೆ ಗೊತ್ತಿಲ್ಲ. ಮತ್ತು ಅವರ ವರ್ಗ ಭಾವನೆಗಳು ಮೊದಲಿದ್ದಂತೆಯೇ ಉಳಿದುಕೊಂಡಿವೆ. ಇನ್ನು ಕೆಲವರು ತುಂಬಾ ಅಹಂಕಾರಿಗಳಾಗಿದ್ದು ಕೆಲವು ಗ್ರಂಥ-ಪದಪುಂಜಗಳನ್ನು ಓದಿಕೊಂಡು ತಮ್ಮನ್ನು ಭಾರಿ ಭಯಂಕರವೆಂದು ಭಾವಿಸುವ ತುಂಬಾ ಹಮ್ಮಿನವರಾಗಿದ್ದಾರೆ. ಆದರೆ ಯಾವಾಗಲಾದರೂ ಬಿರುಗಾಳಿ ಬೀಸಲಾರಂಭಿಸಿದರೆ ಅವರು ಕಾರ್ಮಿಕರು ಮತ್ತು ಬಹುತೇಕ ರೈತರು ತೆಗೆದುಕೊಳ್ಳುವ ನಿಲುವಿಗಿಂತ ತೀರಾ ಭಿನ್ನವೇ ಆದ ನಿಲುವನ್ನು ತಳೆಯುತ್ತಾರೆ. ರೈತರು ಮತ್ತು ಕಾರ್ಮಿಕರು ದೃಢವಾಗಿ ನಿಂತರೆ ಇವರು ಹೊಯ್ದಾಡುತ್ತಾರೆ. ರೈತರು ಮತ್ತು ಕಾರ್ಮಿಕರು ನೇರನುಡಿಯವರಾದರೆ ಇವರು ಹೊರಳು ಮಾತುಗಾರರಾಗಿರುತ್ತಾರೆ. ಆದ್ದರಿಂದ ಇತರರಿಗೆ ಶಿಕ್ಷಣ ನೀಡುವ ಜನರೆಂದೂ ಶಿಕ್ಷಿತರಾಗಿರಬೇಕಾದ ಅಗತ್ಯವಿಲ್ಲ ಮತ್ತು ಅವರಿನ್ನು ಅಧ್ಯಯನ ಮಾಡುವ ಅಗತ್ಯವಿಲ್ಲ ಎಂದು ಭಾವಿಸುವುದು ತಪ್ಪು. ಅಥವಾ ಸಮಾಜವಾದಿ ಪುನರ್‌ರೂಪಿಸುವಿಕೆ ಎಂಬುದರ ಅರ್ಥ ಇತರರನ್ನು - ಭೂಮಾಲೀಕರನ್ನು

ಬಂಡವಾಳಶಾಹಿಗಳನ್ನು ಮತ್ತು ಬಿಡಿಬಿಡಿ ಉತ್ಪಾದಕರನ್ನು - ಪುನರ್‌ರೂಪುಗೊಳಿಸುವುದೇ ಹೊರತು ಬುದ್ಧಿಜೀವಿಗಳನ್ನಲ್ಲ ಎಂದು ಭಾವಿಸುವುದೂ ತಪ್ಪು. ಬುದ್ಧಿಜೀವಿಗಳಿಗೂ ಸಹ ಪುನರ್‌ರೂಪಿಕೆಯ ಅಗತ್ಯವಿದೆ. ಕೇವಲ ತಮ್ಮ ಮೂಲಭೂತ ನಿಲುವನ್ನು ಬದಲಾಯಿಸಿಕೊಳ್ಳದವರು ಮಾತ್ರವಲ್ಲ, ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕು ಮತ್ತು ತಮ್ಮನ್ನು ತಾವು ಪುನರ್‌ರೂಪಿಸಿಕೊಳ್ಳಬೇಕು. ನಾನು "ಪ್ರತಿಯೊಬ್ಬರೂ" ಎಂದು ಹೇಳುತ್ತೇನೆ. ಇದು ಇಲ್ಲಿ ಉಪಸ್ಥಿತರಿರುವ ನಮ್ಮನ್ನೂ ಒಳಗೊಳ್ಳುತ್ತದೆ. ಪರಿಸ್ಥಿತಿಗಳು ಯಾವಾಗಲೂ ಬದಲಾಗುತ್ತಾ ಇರುತ್ತವೆ. ತನ್ನ ಚಿಂತನೆಯನ್ನು ಹೊಸ ಪರಿಸ್ಥಿತಿಗಳಿಗೆ ಸರಿ ಹೊಂದಿಸಿಕೊಳ್ಳಲು ತಾನು ಅಧ್ಯಯನ ಮಾಡಲೇಬೇಕು. ಮಾರ್ಕ್ಸ್‌ವಾದದ ಬಗ್ಗೆ ಸಾಪೇಕ್ಷ ಗ್ರಹಿಕೆ ಹೊಂದಿರುವವರೂ ಸಹ ಮತ್ತು ತಮ್ಮ ಕಾರ್ಮಿಕ ವರ್ಗದ ನಿಲುವಿನಲ್ಲಿ ತುಲನಾತ್ಮಕವಾಗಿ ದೃಢತೆಯಿರುವವರೂ ಸಹ ಅಧ್ಯಯನ ಮಾಡುತ್ತಲೇ ಹೋಗಬೇಕಾಗುತ್ತದೆ. ಹೊಸತಾದದ್ದನ್ನು ಹೀರಿಕೊಳ್ಳಬೇಕಾಗುತ್ತದೆ. ಮತ್ತು ಹೊಸ ಸಮಸ್ಯೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಬುದ್ಧಿಜೀವಿಗಳು ಜೋಳಿಗೆನಿಂದ ತಮ್ಮ ಮನಸ್ಸುಗಳನ್ನು ಹೊರತೆಗೆಯದೇ ಇತತರಿಗೆ ಶಿಕ್ಷಣ ನೀಡುವ ಕರ್ತವ್ಯವನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಸ್ವಾಭಾವಿಕವಾಗಿ ಶಿಕ್ಷಣ ನೀಡುವಾಗ ನಾವೂ ಕಲಿತುಕೊಳ್ಳಬೇಕಾಗುತ್ತದೆ ಹಾಗೂ ಶಿಕ್ಷಕರಾಗಿ ಪ್ರವರ್ತಿಸುವಾಗ ವಿದ್ಯಾರ್ಥಿಗಳಾಗಿಯೂ ಇರಬೇಕಾಗುತ್ತದೆ. ಒಳ್ಳೆಯ ಶಿಕ್ಷಕನಾಗಿರಬೇಕಾದರೆ ಮೊದಲು ಆತ ಒಳ್ಳೆಯ ವಿದ್ಯಾರ್ಥಿಯಾಗಿರಲೇಬೇಕು. ಕೇವಲ ಪುಸ್ತಕಗಳಿಂದ ಕಲಿತುಕೊಳ್ಳಲು ಸಾಧ್ಯವಾಗದ ಹಲವಾರು ವಿಚಾರಗಳಿವೆ. ಉತ್ಪಾದನೆಯಲ್ಲಿ ತೊಡಗಿಕೊಂಡವರಿಂದ, ಕಾರ್ಮಿಕರಿಂದ, ಬಡ ಮತ್ತು ಕೆಳ ಮಧ್ಯಮ ರೈತರಿಂದ ಹಾಗೂ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ, ಕಲಿಸುವವನಿಂದ ಕಲಿತುಕೊಳ್ಳಬೇಕು. ನನ್ನ ಅಭಿಪ್ರಾಯದಲ್ಲಿ, ನಮ್ಮ ಬುದ್ಧಿಜೀವಿಗಳಲ್ಲಿ ಬಹುತೇಕರು ಕಲಿಯುವ ಇಚ್ಛೆಯುಳ್ಳವರಾಗಿದ್ದಾರೆ. ನಾವು ಸ್ನೇಹಪೂರ್ಣ ಹೃದಯದಿಂದ ಹಾಗೂ ಅವರ ಕಲಿಯುವ ಇಚ್ಛೆಯ ಆಧಾರದ ಮೇಲೆ ಸೂಕ್ತ ರೀತಿಯಲ್ಲಿ ಅವರಿಗೆ ಸಹಕರಿಸುವುದು ನಮ್ಮ ಕರ್ತವ್ಯ. ನಾವು ಕಡ್ಡಾಯವನ್ನು ಆಶ್ರಯಿಸಿ ಅವರನ್ನು ಅಧ್ಯಯನ ಮಾಡುವಂತೆ ಬಲವಂತಪಡಿಸಲೇಬಾರದು.

ನಾಲ್ಕನೆಯದಾಗಿ, ಬುದ್ಧಿಜೀವಿಗಳು ಕಾರ್ಮಿಕ ಮತ್ತು ರೈತ ಸಮೂಹಗಳೊಂದಿಗೆ ಐಕ್ಯಗೊಳ್ಳುವ ಪ್ರಶ್ನೆ ಇದೆ. ಕಾರ್ಮಿಕ ಮತ್ತು ರೈತ ಸಮೂಹಗಳಿಗೆ ಸೇವೆ ಸಲ್ಲಿಸುವುದು. ಬುದ್ಧಿಜೀವಿಗಳ ಕರ್ತವ್ಯವಾಗಿರುವುದರಿಂದ ಮೊಟ್ಟ ಮೊದಲನೆಯದಾಗಿ, ಅವರು ಆ ಸಮೂಹಗಳನ್ನು ಅರಿತುಕೊಳ್ಳಬೇಕು. ಹಾಗೂ ಅವರ ಬದುಕು, ಕೆಲಸ ಮತ್ತು ಚಿಂತನೆಗಳೊಂದಿಗೆ ನಿಕಟವಾಗಬೇಕು. ಬುದ್ಧಿಜೀವಿಗಳು ಜನಸಮೂಹಗಳ ನಡುವೆ ಹೋಗುವಂತೆ, ಕಾರ್ಖಾನೆಗಳಿಗೆ ಮತ್ತು ಹಳ್ಳಿಗಳಿಗೆ ಹೋಗುವಂತೆ ಪ್ರೋತ್ಸಾಹಿಸುತ್ತೇವೆ. ನಿಮ್ಮ ಇಡೀ ಜೀವನದಲ್ಲಿ ಎಂದೂ ಒಬ್ಬ ಕಾರ್ಮಿಕನನ್ನು ಅಥವಾ ಒಬ್ಬ ರೈತನನ್ನು ನೀವು ಭೇಟಿಯಾಗದಿದ್ದರೆ ಅದು ತೀರಾ ಕೆಟ್ಟದ್ದು. ನಮ್ಮ ಸರ್ಕಾರಿ ನೌಕರರು, ಲೇಖಕರು, ಕಲಾಕಾರರು ಮತ್ತು ವೈಜ್ಞಾನಿಕ ಸಂಶೋಧನಾ ಕೆಲಸಗಾರರು ಕಾರ್ಮಿಕರೊಂದಿಗೆ ಮತ್ತು ರೈತರೊಂದಿಗೆ ನಿಕಟವಾಗುವುದಕ್ಕೆ ಪ್ರತೀ ಅವಕಾಶವನ್ನು ಬಿಡದೆ ಬಳಸಿಕೊಳ್ಳಬೇಕು. ಕೆಲವರು ಸುಮ್ಮನೇ ನೋಡುವುದಕ್ಕೆ ಕಾರ್ಖಾನೆಗಳಿಗೆ ಅಥವಾ ಹಳ್ಳಿಗೆಳಿಗೆ ಹೋಗಬಹುದು. ಇದನ್ನು "ಕುದುರೆ ಮೇಲೆ ಕುಳಿತುಕೊಂಡೇ ಹೂವುಗಳನ್ನು ನೋಡುವುದು" ಎಂದು ಕರೆಯಬಹುದು. ಹಾಗೂ ಇದು ಏನೇನೂ ಇಲ್ಲದಕ್ಕಿಂತ ಏನೋ ಒಂದಿಷ್ಟು ಉತ್ತಮ. ಮತ್ತೆ ಕೆಲವರು ಸಂಶೋಧನೆಗಳನ್ನು ಮಾಡುತ್ತಾ, ಗೆಳೆಯರನ್ನು ಮಾಡಿಕೊಳ್ಳುತ್ತಾ ಕೆಲವು ತಿಂಗಳುಗಳ ಕಾಲ ಅಲ್ಲಿಯೇ ಉಳಿದುಕೊಳ್ಳಬಹುದು. ಇದನ್ನು "ಹೂವುಗಳನ್ನು ನೋಡುವುದಕ್ಕೆ ಕೆಳಗಿಳಿಯುವುದು" ಎಂದು ಕರೆಯಬಹುದು. ಇನ್ನೂ ಕೆಲವರು ಗಣನೀಯ ಕಾಲದವರೆಗೆ, ಅಂದರೆ ಎರಡು ಅಥವಾ ಮೂರು ವರ್ಷಗಳ ಕಾಲ ಅಥವಾ ಅದಕ್ಕಿಂತಲೂ ದೀರ್ಘ ಕಾಲಾವಧಿಯವರೆಗೆ ಅಲ್ಲಿಯೇ ಉಳಿದುಕೊಂಡು ಬದುಕಬಹುದು. ಇದನ್ನು "ಸ್ಥಿರವಾಗಿ ನೆಲೆಸುವುದು" ಎಂದು ಕರೆಯಬಹುದು. ಕೆಲವು ಬುದ್ಧಿಜೀವಿಗಳು ಕಾರ್ಮಿಕರ ಮತ್ತು ರೈತರ ನಡುವೆಯೇ ಜೀವಿಸುತ್ತಾರೆ. ನಿದರ್ಶನಕ್ಕಾಗಿ, ಕಾರ್ಖಾನೆಗಳಲ್ಲಿ ಕೈಗಾರಿಕಾ ತಂತ್ರಜ್ಞರು ಹಾಗೂ ಹಳ್ಳಿಗಾಡಿನಲ್ಲಿ ಕೃಷಿ ತಂತ್ರಜ್ಞರು ಮತ್ತು ಗ್ರಾಮೀಣ ಶಾಲಾ ಶಿಕ್ಷಕರು, ಅವರು ತಮ್ಮ ಕೆಲಸವನ್ನು ಉತ್ತಮವಾಗಿ ಮಾಡಬೇಕು, ತಮ್ಮನ್ನು ಕಾರ್ಮಿಕರೊಂದಿಗೆ ಮತ್ತು ರೈತರೊಂದಿಗೆ ಐಕ್ಯಗೊಳಿಸಿಕೊಳ್ಳಬೇಕು. "ಕಾರ್ಮಿಕರೊಂದಿಗೆ ಮತ್ತು ರೈತರೊಂದಿಗೆ ನಿಕಟವಾಗುವುದು" ಮೂಲತಃ ಒಂದು ಹವ್ಯಾಸವೇ ಆಗುವಂತಹ ಒಂದು ವಾತಾವರಣವನ್ನು ನಾವು ಸೃಷ್ಟಿಸಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ, ಹಾಗೆ ಮಾಡುವಂತಹ ದೊಡ್ಡ ಸಂಖ್ಯೆಯ ಬುದ್ಧಿಜೀವಿಗಳು ನಮ್ಮಲ್ಲಿರಬೇಕು. ಅಂದಾಕ್ಷಣ ಎಲ್ಲರೂ ಎಂದೇನಲ್ಲ. ಒಂದಲ್ಲಾ ಒಂದು ಕಾರಣಕ್ಕಾಗಿ ಕೆಲವರಿಗೆ ಹೋಗಲು ಸಾಧ್ಯವಾಗುವುದಿಲ್ಲ. ಆದರೆ ಸಾಧ್ಯವಾದಷ್ಟೂ ಜನ ಹೋಗುತ್ತಾರೆ ಎಂಬ ಭರವಸೆ ನಮಗಿದೆ. ಏಕಕಾಲದಲ್ಲಿಯೇ ಎಲ್ಲರೂ ಹೋಗಲು ಸಾಧ್ಯವಿಲ್ಲ. ಆದರೆ ಅವರು ತಂಡತಂಡಗಳಲ್ಲಿ ಬೇರೆಬೇರೆ ಸಮಯದಲ್ಲಿ ಹೋಗಬಹುದು. ನಾವು ಯೆನಾನ್‌ನಲ್ಲಿದ್ದ ಹಳೆಯ ದಿನಗಳಲ್ಲಿ ಬುದ್ಧಿಜೀವಿಗಳಿಗೆ ಕಾರ್ಮಿಕರೊಂದಿಗೆ ಮತ್ತು ರೈತರೊಂದಿಗೆ ನೇರ ಸಂಪರ್ಕ ಹೊಂದಲು ಸಮರ್ಥರನ್ನಾಗಿಸಲಾಗಿತ್ತು. ಅವರಲ್ಲಿನ ಅನೇಕರು ಯೆನಾನ್‌ನಲ್ಲಿ ತಮ್ಮ ಆಲೋಚನೆಯಲ್ಲಿ ಬಹಳಷ್ಟು ಗೊಂದಲಕ್ಕೊಳಗಾಗಿ ಎಲ್ಲಾ ರೀತಿಯ ವಿಲಕ್ಷಣ ವಾದಗಳೊಂದಿಗೆ ಬಂದರು. ಅವರಿಗೆ ಜನಸಮೂಹಗಳ ನಡುವೆ ಹೋಗುವಂತೆ ಸಲಹೆ ಮಾಡುತ್ತಾ ನಾವು ಒಂದು ಚರ್ಚೆಯನ್ನು ಸಂಘಟಿಸಿದೆವು. ನಂತರದಲ್ಲಿ ಅನೇಕರು ಹೋದರು ಹಾಗೂ ಫಲಿತಾಂಶಗಳು ತುಂಬಾ ಉತ್ತಮವಾಗಿದ್ದವು. **ಒಬ್ಬ ಬುದ್ಧಿಜೀವಿಯ ಗ್ರಂಥಜ್ಞಾನವು ಆಚರಣೆಯೊಂದಿಗೆ ಐಕ್ಯಗೊಳ್ಳುವವರೆಗೆ ಅದು ಪೂರ್ಣವಲ್ಲ.** ವಾಸ್ತವದಲ್ಲಿ ಅದು ತೀರಾ ಅಪೂರ್ಣವಾಗಿಯೇ ಇರುತ್ತದೆಯೇನೋ. ಮುಖ್ಯವಾಗಿ ಪುಸ್ತಕಗಳನ್ನು ಓದುವ ಮೂಲಕವೇ ಬುದ್ಧಿಜೀವಿಗಳು ನಮ್ಮ ಪೂರ್ವಜರ ಅನುಭವವನ್ನು ಗಳಿಸಿಕೊಳ್ಳುತ್ತಾರೆ. ಪುಸ್ತಕಗಳನ್ನು ಓದುವುದು ಖಂಡಿತವಾಗಿ ಅವಶ್ಯಕವೇನೋ ಹೌದು. ಆದರೆ ಅದು ತನ್ನಿಂದ ತಾನೇ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ವಾಸ್ತವ ಪರಿಸ್ಥಿತಿಯನ್ನು ಅಧ್ಯಯನ ಮಾಡಬೇಕು. ಆಚರಣಾತ್ಮಕ ಅನುಭವವನ್ನು ಮತ್ತು ನಿರ್ದಿಷ್ಟ ಭೌತಿಕತೆಯನ್ನು ಪರೀಕ್ಷಿಸಬೇಕು. ಕಾರ್ಮಿಕರ ಜೊತೆ ಮತ್ತು ರೈತರ ಜೊತೆ ಸ್ನೇಹವನ್ನು ಬೆಳೆಸಬೇಕು. ಕಾರ್ಮಿಕರೊಂದಿಗೆ ಮತ್ತು ರೈತರೊಂದಿಗೆ ಸ್ನೇಹವನ್ನು ಬೆಳೆಸುವುದೇನೂ ಸರಳ ಕೆಲಸವಲ್ಲ. ಈಗಲೂ ಸಹ ಜನರು ಕಾರ್ಖಾನೆಗಳಿಗೆ ಅಥವಾ ಹಳ್ಳಿಗಳಿಗೆ ಹೋದಾಗ ಕೆಲವುಗಳಲ್ಲಿ ಉತ್ತಮ ಫಲಿತಾಂಶಗಳಿರುತ್ತವೆ. ಆದರೆ ಇನ್ನೂ ಕೆಲವುಗಳಲ್ಲಿ ಉತ್ತಮವಾಗಿರುವುದಿಲ್ಲ. ಇಲ್ಲಿ ಅಡಕವಾಗಿರುವುದೇನೆಂದರೆ ಒಬ್ಬ ವ್ಯಕ್ತಿಯ ನಿಲುವು ಅಥವಾ ಮನೋಭಾವ. ಅಂದರೆ ಆತನ ಪ್ರಪಂಚ ದೃಷ್ಟಿಕೋನ. "ನೂರು ಚಿಂತನಾ ಪಂಥಗಳು ಸಂಘರ್ಷಿಸಲಿ" ಎಂದು ನಾವು ಪ್ರತಿಪಾದಿಸುತ್ತೇವೆ. ಕಲಿಕೆಯ ಪ್ರತಿಯೊಂದೂ ಶಾಖೆಯಲ್ಲೂ ಅನೇಕ ಪಂಥಗಳು ಮತ್ತು ಧಾರೆಗಳು ಇರಬಹುದು. ಆದರೂ ಪ್ರಪಂಚ ದೃಷ್ಟಿಕೋನದ ವಿಚಾರದಲ್ಲಿ ಇಂದು ಮೂಲಭೂತವಾಗಿ ಕೇವಲ ಎರಡು ಪಂಥಗಳಿವೆ - ಕಾರ್ಮಿಕ ವರ್ಗದ್ದು ಮತ್ತು ಬಂಡವಾಳಶಾಹಿಯದ್ದು. ಅದು ಇವೆರಡರಲ್ಲಿ ಒಂದಾಗಿರುತ್ತದೆ. ಒಂದೋ ಕಾರ್ಮಿಕ ವರ್ಗದ ಪ್ರಪಂಚ ದೃಷ್ಟಿಕೋನವಾಗಿರುತ್ತದೆ ಇಲ್ಲವೇ ಬಂಡವಾಳಶಾಹಿ ಪ್ರಪಂಚ ದೃಷ್ಟಿಕೋನವಾಗಿರುತ್ತದೆ. ಕಮ್ಯೂನಿಸ್ಟ್ ಪ್ರಪಂಚ ದೃಷ್ಟಿಕೋನವು ಕಾರ್ಮಿಕ ವರ್ಗದ ಪ್ರಪಂಚ ದೃಷ್ಟಿಕೋನವಾಗಿರುತ್ತದೆಯೇ ಹೊರತು ಇನ್ನಾವುದೇ ವರ್ಗದ್ದಲ್ಲ. ನಮ್ಮ ಪ್ರಸ್ತುತ ಬುದ್ಧಿಜೀವಿಗಳಲ್ಲಿನ

ಬಹುತೇಕರು ಹಳೆಯ ಸಮಾಜದಿಂದ ಮತ್ತು ಕಾರ್ಮಿಕ ವರ್ಗವಲ್ಲದ ಕುಟುಂಬಗಳಿಂದ ಬಂದವರಾಗಿದ್ದಾರೆ. ಕಾರ್ಮಿಕರು ಮತ್ತು ರೈತರ ಕುಟುಂಬಗಳಿಂದ ಬಂದವರೂ ಕೂಡ ಇನ್ನೂ ಬಂಡವಾಳಶಾಹಿ ಬುದ್ಧಿಜೀವಿಗಳೇ ಆಗಿರುತ್ತಾರೆ. ಏಕೆಂದರೆ ವಿಮೋಚನೆಯ ಪೂರ್ವದಲ್ಲಿ ಅವರು ಪಡೆದುಕೊಂಡ ಶಿಕ್ಷಣವು ಬಂಡವಾಳಶಾಹಿ ಶಿಕ್ಷಣವಾಗಿದ್ದು ಅವರ ಪ್ರಪಂಚ ದೃಷ್ಟಿಕೋನವು ಮೂಲಭೂತವಾಗಿ ಬಂಡವಾಳಶಾಹಿ ದೃಷ್ಟಿಕೋನವೇ ಆಗಿರುತ್ತದೆ. ಅವರು ಹಳೆಯದನ್ನು ತ್ಯಜಿಸಿ ಅದರ ಜಾಗದಲ್ಲಿ ಕಾರ್ಮಿಕ ವರ್ಗದ ಪ್ರಪಂಚ ದೃಷ್ಟಿಕೋನವನ್ನು ಹೊಂದುವುದಿಲ್ಲವಾದರೆ, ತಮ್ಮ ದೃಷ್ಟಿಕೋನದಲ್ಲಿ, ನಿಲುವಿನಲ್ಲಿ ಮತ್ತು ಭಾವನೆಗಳಲ್ಲಿ ಅವರು ಕಾರ್ಮಿಕರಿಗಿಂತ ಮತ್ತು ರೈತರಿಗಿಂತ ಭಿನ್ನವಾಗಿಯೇ ಉಳಿದುಕೊಳ್ಳುತ್ತಾರೆ. ವೃತ್ತಾಕಾರದ ತೂತುಗಳಲ್ಲಿ ಚೌಕಾಕಾರದ ಗೂಟಗಳಂತೆ ಇರುತ್ತಾರೆ. ಅವರಿಗೆ ಕಾರ್ಮಿಕರು ಮತ್ತು ರೈತರು ತಮ್ಮ ಹೃದಯಗಳನ್ನು ತೆರೆಯುವುದಿಲ್ಲ. ಬುದ್ಧಿಜೀವಿಗಳು ತಮ್ಮನ್ನು ಕಾರ್ಮಿಕರೊಂದಿಗೆ ಮತ್ತು ರೈತರೊಂದಿಗೆ ಐಕ್ಯಗೊಳಿಸಿಕೊಂಡರೆ ಮತ್ತು ಅವರೊಂದಿಗೆ ಗೆಳೆತನ ಬೆಳೆಸಿಕೊಂಡರೆ ಅವರು ಪುಸ್ತಕಗಳಿಂದ ಕಲಿತುಕೊಂಡ ಮಾರ್ಕ್ಸ್‌ವಾದ ನಿಜವಾಗಿಯೂ ಅವರದ್ದೇ ಆಗಲು ಸಾಧ್ಯವಿದೆ. ಮಾರ್ಕ್ಸ್‌ವಾದದ ನೈಜ ಗ್ರಹಿಕೆಯನ್ನು ಪಡೆದುಕೊಳ್ಳುವುದಕ್ಕೆ ಅದನ್ನು ಕೇವಲ ಪುಸ್ತಕಗಳಿಂದ ಮಾತ್ರವಲ್ಲ. ಮುಖ್ಯವಾಗಿ ವರ್ಗ ಸಂಘರ್ಷದ ಮೂಲಕವೆ ಹಾಗೂ ಆಚರಣಾತ್ಮಕ ಕೆಲಸ ಮತ್ತು ಕಾರ್ಮಿಕ ಮತ್ತು ರೈತ ಸಮೂಹಗಳೊಂದಿಗಿನ ನಿಕಟ ಸಂಪರ್ಕದ ಮೂಲಕವೇ ಕಲಿತುಕೊಳ್ಳಬೇಕು. ನಮ್ಮ ಬುದ್ಧಿಜೀವಿಗಳು ಕೆಲವು ಮಾರ್ಕ್ಸ್‌ವಾದಿ ಪುಸ್ತಕಗಳನ್ನು ಓದುವುದರ ಜೊತೆಗೆ ಕಾರ್ಮಿಕ ಮತ್ತು ರೈತ ಸಮೂಹಗಳೊಂದಿಗಿನ ನಿಕಟ ಸಂಪರ್ಕದ ಮೂಲಕ ಹಾಗೂ ತಮ್ಮದೇ ಆಚರಣಾತ್ಮಕ ಕೆಲಸದ ಮೂಲಕ ಒಂದಿಷ್ಟು ತಿಳುವಳಿಕೆಯನ್ನು ಗಳಿಸಿಕೊಂಡರೆ ನಾವೆಲ್ಲರೂ ಒಂದೇ ಭಾಷೆಯನ್ನು ಮಾತನಾಡುತ್ತಿರುತ್ತೇವೆ. ಕೇವಲ ದೇಶಪ್ರೇಮತ್ವದ ಸಾಮಾನ್ಯ ಭಾಷೆ ಮತ್ತು ಸಮಾಜವಾದಿ ವ್ಯವಸ್ಥೆಯ ಸಾಮಾನ್ಯ ಭಾಷೆಯನ್ನು, ಮಾತ್ರವಲ್ಲ, ಬಹುಶಃ ಕಮ್ಯೂನಿಸ್ಟ್ ಪ್ರಪಂಚ ದೃಷ್ಟಿಕೋನದ ಸಾಮಾನ್ಯ ಭಾಷೆಯನ್ನೂ ಸಹ ಮಾತನಾಡುತ್ತಿರುತ್ತೇವೆ. ಅದು ಸಂಭವಿಸಿದರೆ ನಾವೆಲ್ಲರೂ ಖಂಡಿತವಾಗಿಯೂ ಇನ್ನಷ್ಟು ಉತ್ತಮವಾಗಿ ಕಾರ್ಯನಿರ್ವಹಿಸುತ್ತೇವೆ.

ಐದನೆಯದಾಗಿ ತಿದ್ದುಪಡಿ. ತಿದ್ದುಪಡಿ ಎಂದರೆ ಒಬ್ಬನ ಆಲೋಚನಾ ರೀತಿ ಮತ್ತು ಕಾರ್ಯಶೈಲಿಯನ್ನು ಸರಿಪಡಿಸಿಕೊಳ್ಳುವುದು ಎಂದರ್ಥ. ಜಪಾನ್ ವಿರೋಧಿ ಯುದ್ಧದ ಅವಧಿಯಲ್ಲಿ, ವಿಮೋಚನಾ ಯುದ್ಧ ಅವಧಿಯಲ್ಲಿ ಮತ್ತು 'ಚೀನಾ ಜನತಾ ಗಣರಾಜ್ಯ' ಸ್ಥಾಪನೆಯಾದ ನಂತರದ ಆರಂಭಿಕ ದಿನಗಳಲ್ಲಿ ಕಮ್ಯೂನಿಸ್ಟ್ ಪಕ್ಷದೊಳಗೆ ತಿದ್ದುಪಡಿ ಚಳುವಳಿಗಳನ್ನು ನಡೆಸಲಾಗಿತ್ತು.[2] ಈಗ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಈ ವರ್ಷ ಪಕ್ಷದೊಳಗೆ ನಡೆಸಬೇಕಿರುವ ಮತ್ತೊಂದು ತಿದ್ದುಪಡಿಯ ಕುರಿತು ನಿರ್ಣಯಿಸಿದೆ. ಪಕ್ಷೇತರ ಜನರೂ ಇದರಲ್ಲಿ ಪಾಲ್ಗೊಳ್ಳಬಹುದು ಅಥವಾ ಅವರಿಗೆ ಇಷ್ಟವಿಲ್ಲದಿದ್ದರೆ ಪಾಲ್ಗೊಳ್ಳುವ ಅಗತ್ಯವಿಲ್ಲ. ಈ ತಿದ್ದುಪಡಿ ಚಳುವಳಿಯಲ್ಲಿನ ಮುಖ್ಯ ವಿಚಾರವೆಂದರೆ ಒಬ್ಬನ ಆಲೋಚನಾ ವಿಧಾನದಲ್ಲಿ ಮತ್ತು ಕಾರ್ಯಶೈಲಿಯಲ್ಲಿ ಇರುವ ಕೆಳಗಿನ ಮೂರು ದೋಷಗಳನ್ನು ವಿಮರ್ಶಿಸುವುದು - ವ್ಯಕ್ತಿನಿಷ್ಠವಾದ, ಅಧಿಕಾರಶಾಹಿತ್ವ ಮತ್ತು ಸಂಕುಚಿತವಾದ. ಜಪಾನ್ ವಿರೋಧಿ ಯುದ್ಧದಲ್ಲಿನ ತಿದ್ದುಪಡಿ ಚಳುವಳಿಯಲ್ಲಿದ್ದಂತೆಯೇ ಈ ಬಾರಿಯೂ ನಮ್ಮ ವಿಧಾನವು ಅನೇಕ ದಸ್ತಾವೇಜುಗಳನ್ನು ಅಧ್ಯಯನ ಮಾಡುವುದು, ನಂತರ ಅಂತಹ ಅಧ್ಯಯನದ ಆಧಾರದ ಮೇಲೆ ಒಬ್ಬನ ಆಲೋಚನೆ ಮತ್ತು ಕೆಲಸಗಳನ್ನು ಪರೀಕ್ಷಿಸುವುದು ಹಾಗೂ ನ್ಯೂನತೆ ಮತ್ತು ತಪ್ಪುಗಳನ್ನು ಬಯಲುಗೊಳಿಸುವುದರ ಸಲುವಾಗಿ ಮತ್ತು ಸರಿಯಾದುದ್ದನ್ನು, ಒಳ್ಳೆಯದನ್ನು ಉತ್ತೇಜಿಸುವುದರ ಸಲುವಾಗಿ ವಿಮರ್ಶೆ ಮತ್ತು ಸ್ವವಿಮರ್ಶೆಗಳನ್ನು ತೆರೆದಿಡುವುದೇ ಆಗಿರುತ್ತದೆ. ಒಂದೆಡೆ ನಾವು ಕಟ್ಟುನಿಟ್ಟಾಗಿರಬೇಕು ಹಾಗೂ ತಪ್ಪುಗಳ ವಿಮರ್ಶೆ ಮತ್ತು ಸ್ವವಿಮರ್ಶೆಗಳನ್ನು ಅಸಡ್ಡೆಯಿಂದಲ್ಲದೇ ಗಂಭೀರವಾಗಿ ಮಾಡಿ ಅವುಗಳನ್ನು ಸರಿತಿದ್ದಲೇಬೇಕು. ಇನ್ನೊಂದೆಡೆ ನಾವು ಒರಟಾಗಿ ಇರಲೇಬಾರದು ಮತ್ತು 'ಭವಿಷ್ಯದ ತಪ್ಪುಗಳನ್ನು ತಪ್ಪಿಸಲು ಗತದ ತಪ್ಪುಗಳಿಂದ ಕಲಿಯುವ ಮತ್ತು ರೋಗಿಯನ್ನು ಉಳಿಸುವುದಕ್ಕೆ ರೋಗವನ್ನು ತೊಡೆದುಹಾಕುವ' ನಿಯಮವನ್ನು ಪಾಲಿಸಬೇಕು. ಹಾಗೂ 'ಒಂದೇ ಹೊಡೆತದಲ್ಲಿ ಜನರನ್ನು ಮುಗಿಸಿಹಾಕುವ' ವಿಧಾನವನ್ನು ವಿರೋಧಿಸಲೇಬೇಕು.

ನಮ್ಮದು ಒಂದು ಉದಾತ್ತ ಪಕ್ಷ. ಒಂದು ಭವ್ಯ ಪಕ್ಷ. ಒಂದು ಸರಿಯಾದ ಪಕ್ಷ. ಇದನ್ನು ಒಂದು ವಾಸ್ತವಾಂಶ ಎಂದು ಸಮರ್ಥಿಸಿಕೊಳ್ಳಲೇಬೇಕು. ಆದರೆ ನಮ್ಮಲ್ಲಿ ಇನ್ನೂ ನ್ಯೂನತೆಗಳಿವೆ ಹಾಗೂ ಇದನ್ನೂ ಸಹ ಒಂದು ವಾಸ್ತವಾಂಶ ಎಂದು ಸಮರ್ಥಿಸಿಕೊಳ್ಳಲೇಬೇಕು. ಯಾವುದು ಸರಿಯೋ ಅದನ್ನು ಮಾತ್ರ ಸಮರ್ಥಿಸಿಕೊಳ್ಳಬೇಕೇ ಹೊರತು ಪ್ರತಿಯೊಂದನ್ನೂ ಅಲ್ಲ. ಅದೇ ವೇಳೆಯಲ್ಲಿ ನಾವು ಯಾವುದು ತಪ್ಪೋ ಅದನ್ನು ಮಾತ್ರ ನಿರಾಕರಿಸಬೇಕೇ ಹೊರತು ಪ್ರತಿಯೊಂದನ್ನೂ ಅಲ್ಲ. ನಮ್ಮ ಕೆಲಸದಲ್ಲಿ ಸಾಧನೆಗಳೆ ಪ್ರಮುಖ ವಿಚಾರ. ಆದರೂ ನ್ಯೂನತೆ ಮತ್ತು ತಪ್ಪುಗಳೂ ಕೂಡ ಕಡಿಮೆಯೇನಿಲ್ಲ. ಇದಕ್ಕಾಗಿಯೇ ನಮಗೆ ಒಂದು ತಿದ್ದುಪಡಿ ಆಂದೋಲನದ ಅಗತ್ಯವಿರುವುದು. ನಾವು ನಮ್ಮಲ್ಲಿಯೇ ಇರುವ ವ್ಯಕ್ತಿನಿಷ್ಠವಾದ, ಅಧಿಕಾರಶಾಹಿತ್ವ ಮತ್ತು ಸಂಕುಚಿತವಾದಗಳನ್ನು ವಿಮರ್ಶಿಸಿದರೆ ಅದು ನಮ್ಮ ಪಕ್ಷದ ಪ್ರತಿಷ್ಠೆಯನ್ನು ಕುಗ್ಗಿಸುತ್ತದೆಯೆ? ಇಲ್ಲ ಎಂದು ನನಗನ್ನಿಸುತ್ತದೆ. ಇದಕ್ಕೆ ಪ್ರತಿಯಾಗಿ, ಇದು ನಮ್ಮ ಪಕ್ಷದ ಪ್ರತಿಷ್ಠೆ ಹೆಚ್ಚಾಗುವಂತೆ ಮಾಡುತ್ತದೆ. ಜಪಾನ್ ವಿರೋಧಿ ಯುದ್ಧದ ಅವಧಿಯಲ್ಲಿನ ತಿದ್ದುಪಡಿ ಆಂದೋಲನವು ಇದನ್ನು ರುಜುವಾತುಪಡಿಸಿದೆ. ಅದು ನಮ್ಮ ಪಕ್ಷದ ಪ್ರತಿಷ್ಠೆಯನ್ನು ಹೆಚ್ಚಿಸಿತು. ನಮ್ಮ ಪಕ್ಷ ಸಂಗಾತಿಗಳ ಮತ್ತು ನಮ್ಮ ನುರಿತ ಕಾರ್ಯಕರ್ತರ ಪ್ರತಿಷ್ಠೆಯನ್ನು ಹೆಚ್ಚಿಸಿತು ಹಾಗೂ ಅದು ಹೊಸ ಕಾರ್ಯಕರ್ತರು ಮಹತ್ತರ ಪ್ರಗತಿ ಸಾಧಿಸುವುದಕ್ಕೆ ಅವರನ್ನು ಸಮರ್ಥರನ್ನಾಗಿಸಿತು. ಈ ಎರಡರಲ್ಲಿ ವಿಮರ್ಶೆಗಳಿಗೆ ಹೆದರಿದ್ದು ಯಾರು, ಕಮ್ಯೂನಿಸ್ಟ್ ಪಕ್ಷವೋ ಅಥವಾ ಕೊಮಿಂಗ್‌ಟಾಂಗೋ? ಕೊಮಿಂಗ್‌ಟಾಂಗ್ ವಿಮರ್ಶೆಗಳನ್ನು ಪ್ರತಿಬಂಧಿಸಿತು, ಆದರೆ ಇದು ಅಂತಿಮ ಪರಾಭವದಿಂದ ಅದನ್ನು ರಕ್ಷಿಸಲಿಲ್ಲ. ಕಮ್ಯೂನಿಸ್ಟ್ ಪಕ್ಷವು ವಿಮರ್ಶೆಗಳಿಗೆ ಹೆದರುವುದಿಲ್ಲ. ಏಕೆಂದರೆ ನಾವು ಮಾರ್ಕ್ಸ್‌ವಾದಿಗಳು, ಸತ್ಯ ನಮ್ಮ ಕಡೆ ಇದೆ. ಮೂಲಭೂತ ಜನಸಮೂಹಗಳಾದ ಕಾರ್ಮಿಕರು, ರೈತರು ನಮ್ಮ ಕಡೆ ಇದ್ದಾರೆ. ತಿದ್ದುಪಡಿ ಆಂದೋಲನವು "ಮಾರ್ಕ್ಸ್‌ವಾದಿ ಶಿಕ್ಷಣದ ಒಂದು ವ್ಯಾಪಕವಾದ ಆಂದೋಲನ"[3] ಎಂದು ನಾವು ಹೇಳುತ್ತಿದ್ದೆವು. ತಿದ್ದುಪಡಿ ಎಂದರೆ ಇಡೀ ಪಕ್ಷವು ವಿಮರ್ಶೆ ಮತ್ತು ಸ್ವವಿಮರ್ಶೆಗಳ ಮೂಲಕ ಮಾರ್ಕ್ಸ್‌ವಾದವನ್ನು ಅಭ್ಯಸಿಸುವುದು ಎಂದರ್ಥ. ತಿದ್ದುಪಡಿ ಆಂದೋಲನದ ಪ್ರಕ್ರಿಯೆಯ ಕ್ರಮದಲ್ಲಿ ನಾವು ಖಂಡಿತವಾಗಿಯೂ ಮಾರ್ಕ್ಸ್‌ವಾದದ ಬಗ್ಗೆ ಹೆಚ್ಚು ಕಲಿತುಕೊಳ್ಳಬಹುದು.

ಚೀನಾದ ಪರಿವರ್ತನೆ ಮತ್ತು ನಿರ್ಮಾಣಗಳು ನಾಯಕತ್ವಕ್ಕಾಗಿ ನಮ್ಮನ್ನು ಆಧರಿಸಿವೆ. ನಾವು ನಮ್ಮ ಆಲೋಚನಾ ವಿಧಾನ ಮತ್ತು ಕಾರ್ಯಶೈಲಿಗಳನ್ನು ಸರಿತಿದ್ದಿಕೊಂಡಾಗ ನಮ್ಮ ಕೆಲಸದಲ್ಲಿ ಅತ್ಯುತ್ತಮ ಮುಂದೊಡಗನ್ನು ಪಡೆದುಕೊಳ್ಳುತ್ತೇವೆ. ಬಹಳಷ್ಟು ಸಮರ್ಥರಾಗುತ್ತೇವೆ. ಇನ್ನಷ್ಟು ಚೆನ್ನಾಗಿ ಕಾರ್ಯನಿರ್ವಹಿಸುತ್ತೇವೆ. ಜನರಿಗೆ, ಸಮಾಜವಾದಿ ಧ್ಯೇಯಕ್ಕೆ ತುಂಬು ಹೃದಯದಿಂದ ಸೇವೆ ಸಲ್ಲಿಸುವ ಹಾಗೂ ಬದಲಾವಣೆಗಳನ್ನು ತರುವುದಕ್ಕೆ ಕಟಿಬದ್ಧರಾಗಿರುವ ಅನೇಕ ಜನರ ಅವಶ್ಯಕತೆ ನಮ್ಮ ದೇಶಕ್ಕಿದೆ. ನಾವು ಕಮ್ಯೂನಿಸ್ಟರೆಲ್ಲಾ ಈ ರೀತಿಯ ಜನರಾಗಬೇಕು. ಹಳೆಯ ಚೀನಾದಲ್ಲಿ ಸುಧಾರಣೆಗಳ

ಬಗ್ಗೆ ಮಾತನಾಡುವುದೇ ಅಪರಾಧವಾಗಿತ್ತು. ಆ ಅಪರಾಧಿಗಳನ್ನು ಶಿರಚ್ಛೇದನ ಮಾಡಲಾಗುತ್ತಿತ್ತು, ಸೆರೆಮನೆಗೆ ತಳ್ಳಲಾಗುತ್ತಿತ್ತು. ಹಾಗಿದ್ದಾಗಲೂ, ಯಾವುದಕ್ಕೂ ಹೆದರದೆ ಪುಸ್ತಕ ಮತ್ತು ವೃತ್ತಪತ್ರಿಕೆಗಳನ್ನು ಪ್ರಕಟಿಸಿ, ಜನರಿಗೆ ಶಿಕ್ಷಣ ನೀಡಿ ಸಂಘಟಿಸಿದ ಹಾಗೂ ಪ್ರತೀ ಸ್ವರೂಪದ ಕಷ್ಟಗಳ ಅಡಿಯಲ್ಲಿಯೇ ಅದಮ್ಯ ಹೋರಾಟಗಳನ್ನು ನಡೆಸಿದ ಕಟಿಬದ್ಧ ಸುಧಾರಕರಿದ್ದರು. ಜನತೆಯ ಪ್ರಜಾತಾಂತ್ರಿಕ ಸರ್ವಾಧಿಕಾರವು ನಮ್ಮ ದೇಶದಲ್ಲಿ ಕ್ಷಿಪ್ರಗತಿಯ ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿದೆ. ನಮ್ಮ ಪ್ರಭುತ್ವವನ್ನು ಸ್ಥಾಪಿಸಿ ಕೇವಲ ಕೆಲವೇ ವರ್ಷಗಲಾಗಿವೆ. ಆಗಲೇ ಆರ್ಥಿಕತೆ, ಸಂಸ್ಕೃತಿ, ಶಿಕ್ಷಣ ಮತ್ತು ವಿಜ್ಞಾನಗಳು ಅಭೂತಪೂರ್ವವಾಗಿ ಅರಳುತ್ತಿರುವುದನ್ನು ಜನರು ನೋಡಬಹುದು. ಹೊಸ ಚೀನಾವನ್ನು ಕಟ್ಟುವಲ್ಲಿ ಯಾವುದೇ ಕಷ್ಟಕಾರ್ಪಣ್ಯಗಳು, ಏನೇ ಬರಲಿ ನಾವು ಕಮ್ಯೂನಿಸ್ಟರು ಎದೆಗುಂದುವುದಿಲ್ಲ. ಆದರೆ ಇನ್ನು ಕೇವಲ ನಾವೊಬ್ಬರೇ ಪೂರೈಸಲಾರೆವು. ನಮ್ಮ ಸಮಾಜವನ್ನು ಸಮಾಜವಾದ ಮತ್ತು ಸಮತಾವಾದದ ದಿಕ್ಕಿನಲ್ಲಿ ಪರಿವರ್ತಿಸುವುದಕ್ಕಾಗಿ, ಕಟ್ಟುವುದಕ್ಕಾಗಿ ನಮ್ಮ ಜೊತೆಗೂಡಿ ಎದೆಗುಂದದೇ ಹೋರಾಡುವ, ಉದಾತ್ತ ಆದರ್ಶಗಳಿರುವ ಒಳ್ಳೆಯ ಸಂಖ್ಯೆಯ ಪಕ್ಷೇತರ ಜನರ ಅವಶ್ಯಕತೆ ನಮಗಿದೆ. ಹಲವಾರು ಚೀನಾದ ಹಲವಾರು ಮಿಲಿಯನ್ ಜನರಿಗೆ ಉತ್ತಮ ಬದುಕನ್ನು ಖಾತ್ರಿಗೊಳಿಸುವುದು ಹಾಗೂ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದ ನಮ್ಮ ದೇಶವನ್ನು ಉನ್ನತ ಮಟ್ಟದ ಸಂಸ್ಕೃತಿಯಿರುವ ಸಮೃದ್ಧ ಮತ್ತು ಬಲಿಷ್ಠ ದೇಶವನ್ನಾಗಿ ಕಟ್ಟುವುದು ಬಹು ಪ್ರಯಾಸಕರ ಕೆಲಸ. ಪ್ರಮುಖವಾಗಿ ಈ ಕರ್ತವ್ಯವನ್ನು ಹೆಚ್ಚು ಸಮರ್ಥವಾಗಿ ಹೊತ್ತುಕೊಳ್ಳುವುದಕ್ಕೆ ಶಕ್ತರಾಗುವುದರ ಸಲುವಾಗಿಯೇ ಹಾಗೂ ಉದಾತ್ತ ಆದರ್ಶಗಳಿಂದ ಪ್ರೇರಿತರಾಗಿ ಸುಧಾರಣೆಗಳನ್ನು ಮಾಡುವುದಕ್ಕೆ ಕಟಿಬದ್ಧರಾಗಿರುವ ಪಕ್ಷೇತರ ಜನರ ಜೊತೆಗೂಡಿ ಉತ್ತಮವಾಗಿ ಕೆಲಸ ಮಾಡುವ ಸಲುವಾಗಿಯೇ ನಾವು ಈಗಲೂ ಮತ್ತು ಭವಿಷ್ಯದಲ್ಲೂ ತಿದ್ದುಪಡಿ ಆಂದೋಲನಗಳನ್ನು ನಡೆಸಲೇಬೇಕು ಹಾಗೂ ತಪ್ಪಾಗಿದ್ದು ಏನೇ ಇರಲಿ ಅದನ್ನು ನಿರಂತರವಾಗಿ ತೊಡೆದುಹಾಕಲೇಬೇಕು. ಪಕ್ಕಾ ಭೌತಿಕವಾದಿಗಳು ನಿರ್ಭೀತರು. ನಮ್ಮ ಎಲ್ಲಾ ಒಡನಾಡಿ ಹೋರಾಟಗಾರರು ಯಾವುದೇ ಹಿನ್ನಡೆಗಳಿಗೆ ಅಥವಾ ಅವಹೇಳನಗಳಿಗೆ ಹೆದರದೇ, ಕಮ್ಯೂನಿಸ್ಟರಾದ ನಮ್ಮನ್ನು ವಿಮರ್ಶಿಸಲು ಮತ್ತು ನಮಗೆ ತಮ್ಮ ಸಲಹೆಗಳನ್ನು ಕೊಡಲು ಹಿಂಜರಿಯದೇ ಧೈರ್ಯವಾಗಿ ತಮ್ಮ ಹೊಣೆಗಾರಿಕೆಗಳನ್ನು ಹೊತ್ತುಕೊಂಡು ಎಲ್ಲಾ ಕಷ್ಟಕಾರ್ಪಣ್ಯಗಳನ್ನು ಜಯಿಸುತ್ತಾರೆ ಎಂದು ಆಶಿಸುತ್ತೇವೆ. 'ಸಾವಿರ ಕೊಯ್ತುಗಳ ಸಾವಿಗೂ ಅಂಜದವನು ಚಕ್ರವರ್ತಿಯನ್ನು ಕುದುರೆಯಿಂದ ಕೆಳಗುರುಳಿಸುವುದಕ್ಕೆ ಧೈರ್ಯ ತಾಳುತ್ತಾನೆ' - ಈ ಅದಮ್ಯ ಹುರುಪೇ ಸಮಾಜವಾದ ಮತ್ತು ಸಮತಾವಾದಗಳನ್ನು ಕಟ್ಟುವ ನಮ್ಮ ಹೋರಾಟದಲ್ಲಿ ಬೇಕಾಗಿರುವುದು. ನಮ್ಮ ಕಡೆಯಿಂದ, ನಾವು ಕಮ್ಯೂನಿಸ್ಟರು ನಮ್ಮೊಂದಿಗೆ ಸಹಕರಿಸುವವರಿಗೆ ಅನುಕೂಲಕರವಾದ ಪರಿಸ್ಥಿತಿಗಳು ನಿರ್ಮಿಸಬೇಕು. ನಮ್ಮ ಸಾಮಾನ್ಯ ಕೆಲಸದಲ್ಲಿ ಅವರೊಂದಿಗೆ ಒಳ್ಳೆಯ ಸಂಗಾತಿ ಬಾಂಧವ್ಯಗಳನ್ನು ಸ್ಥಾಪಿಸಬೇಕು ಹಾಗೂ ನಮ್ಮ ಜಂಟಿ ಹೋರಾಟದಲ್ಲಿ ಅವರೊಂದಿಗೆ ಐಕ್ಯಗೊಳ್ಳಬೇಕು.

ಆರನೆಯದಾಗಿ, ಏಕಮುಖತೆಯ ಪ್ರಶ್ನೆ. ಏಕಮುಖತೆ ಎಂದರೆ ಪರಮಪರಿಪೂರ್ಣತೆಯ ಪರಿಭಾಷೆಯಲ್ಲಿ ಆಲೋಚಿಸುವುದು, ಅಂದರೆ, ಸಮಸ್ಯೆಗಳಿಗೆ ಜಡ ಭೌತಿಕವಾದಿ ವಿಧಾನದಲ್ಲಿ ಕೈಹಾಕುವುದು. ನಮ್ಮ ಕೆಲಸದ ಮೌಲ್ಯ ನಿರ್ಣಯಿಸುವಾಗ ಎಲ್ಲವನ್ನೂ ಸಕಾರಾತ್ಮಕವೆಂದೋ ಅಥವಾ ಎಲ್ಲವನ್ನೂ ನಕಾರಾತ್ಮಕವೆಂದೋ ಅಭಿಪ್ರಾಯಪಡುವುದು ಏಕಮುಖತೆಯಾಗುತ್ತದೆ. ಕೇವಲ ಇಷ್ಟನ್ನು ಮಾತ್ರ ಮಾಡುವವರು ನಮ್ಮ ಕಮ್ಯೂನಿಸ್ಟ್ ಪಕ್ಷದ ಒಳಗೆ ಸಾಕಷ್ಟು ಸಂಖ್ಯೆಯಲ್ಲಿ ಮತ್ತು ಹೊರಗೆ ಸುಮಾರು ಜನ ಇದ್ದಾರೆ. ಪ್ರತಿಯೊಂದನ್ನೂ ಸಕಾರಾತ್ಮಕವಾಗಿ ನೋಡುವುದು ಎಂದರೆ ಒಳ್ಳೆಯದನ್ನು ಮಾತ್ರ ನೋಡುವುದೇ ಹೊರತು ಕೆಟ್ಟದ್ದನ್ನಲ್ಲ ಎಂದೂ ಹೊಗಳಿಕೆಯನ್ನು ಮಾತ್ರ ಸಹಿಸಿಕೊಳ್ಳುವುದೇ ಹೊರತು ವಿಮರ್ಶೆಯನ್ನಲ್ಲ ಎಂದೂ ಆಗುತ್ತದೆ. ನಮ್ಮ ಕೆಲಸವು ಪ್ರತಿಯೊಂದು ವಿಚಾರದಲ್ಲೂ ಚೆನ್ನಾಗಿಯೇ ಇದೆ ಎಂದು ಮಾತನಾಡುವುದು ವಾಸ್ತವಾಂಶಗಳಿಗಿಂತ ಭಿನ್ನವಾಗುತ್ತದೆ. ಎಲ್ಲವೂ ಚೆನ್ನಾಗಿಯೇ ಇದೆ ಎಂಬುದು ನಿಜವಲ್ಲ. ನ್ಯೂನತೆಗಳು ಮತ್ತು ತಪ್ಪುಗಳು ಇನ್ನೂ ಇವೆ. ಅಂತೆಯೇ ಎಲ್ಲವೂ ಕೆಟ್ಟದಾಗಿದೆ ಎಂಬುದು ಕೂಡ ನಿಜವಲ್ಲ. ಇದೂ ಕೂಡ ವಾಸ್ತವಾಂಶಗಳಿಗಿಂತ ಭಿನ್ನವಾಗುತ್ತದೆ.  ಇಲ್ಲಿ ವಿಶ್ಲೇಷಣೆಯ ಅವಶ್ಯಕತೆ ಇದೆ. ಎಲ್ಲದನ್ನೂ ಅಲ್ಲಗಳೆಯುವುದು ಎಂದರೆ, ಯಾವುದೇ ವಿಶ್ಲೇಷಣೆಯನ್ನು ಮಾಡದೆ, ಏನನ್ನೂ ಚೆನ್ನಾಗಿ ಮಾಡಿಲ್ಲ, ನೂರಾರು ಮಿಲಿಯನ್ ಜನರು ಪಾಲ್ಗೊಂಡಿರುವ ಸಮಾಜವಾದಿ ನಿರ್ಮಾಣದ ಮಹಾನ್ ಕೆಲಸ. ಒಂದು ಮಹಾನ್ ಹೋರಾಟ ಮೆಚ್ಚುಗೆಗೆ ಯೋಗ್ಯವಾದದ್ದೇನೂ ಇಲ್ಲದ ಒಂದು ಸಂಪೂರ್ಣ ಗೋಜಲು ಎಂದು ಆಲೋಚಿಸಿದಂತಾಗುತ್ತದೆ. ಈ ರೀತಿಯ ಅಭಿಪ್ರಾಯಗಳನ್ನು ಹೊಂದಿದ ಅನೇಕ ಜನರಿಗೂ ಮತ್ತು ಸಮಾಜವಾದಿ ವ್ಯವಸ್ಥೆಯೊಂದಿಗೆ ಹಗೆತನವಿರುವರಿಗೂ ನಡುವೆ ಭಿನ್ನತೆಯಿದೆಯಾದರೂ ಈ ಅಭಿಪ್ರಾಯಗಳು ಬಹಳಷ್ಟು ಅವಿವೇಚಿತ ಮತ್ತು ಅಪಾಯಕಾರಿಯಾಗಿದ್ದು ಅವು ಜನರಿಗೆ ಧೈರ್ಯಗೆಡಿಸುವುದನ್ನು ಮಾತ್ರವೇ ಮಾಡಬಲ್ಲವು. ಎಲ್ಲವೂ ಸಕಾರಾತ್ಮಕವಾಗಿದೆ ಎಂಬ ದೃಷ್ಟಿಕೋನದಿಂದಾಗಲೀ ಅಥವಾ ಎಲ್ಲವೂ ನಕಾರಾತ್ಮಕವಾಗಿದೆ ಎಂಬ ದೃಷ್ಟಿಕೋನದಿಂದಾಗಲೀ ನಮ್ಮ ಕೆಲಸದ ಮೌಲ್ಯ ನಿರ್ಣಯ ಮಾಡುವುದು ತಪ್ಪು. ಸಮಸ್ಯೆಗಳಿಗೆ ಏಕಮುಖ ವ್ಯವಹಾರ ವಿಧಾನವನ್ನು ಅಳವಡಿಸುವ ಜನರನ್ನು ನಾವು ವಿಮರ್ಶಿಸಬೇಕು. ಅವರನ್ನು ವಿಮರ್ಶಿಸುವಲ್ಲಿ "ಭವಿಷ್ಯದ ತಪ್ಪುಗಳನ್ನು ತಪ್ಪಿಸಲು ಗತದ ತಪ್ಪುಗಳಿಂದ ಕಲಿಯುವ ಮತ್ತು ರೋಗಿಯನ್ನು ಉಳಿಸುವುದಕ್ಕೆ ರೋಗವನ್ನು ತೊಡೆದುಹಾಕುವ" ನಿಯಮಕ್ಕೆ ಅನುಗುಣವಾಗಿ ನಾವು ಅವರಿಗೆ ಸಹಾಯವನ್ನಂತೂ ಮಾಡಬೇಕು.

ಕೆಲವು ಜನರು ಹೇಳುತ್ತಾರೆ "ತಿದ್ದುಪಡಿ ಆಂದೋಲನ ಮಾಡಬೇಕಿರುವುದರಿಂದ ಮತ್ತು ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತೆ ಕೇಳಿಕೊಳ್ಳಬೇಕಿರುವುದರಿಂದ ಏಕಮುಖತೆಯು ಅನಿವಾರ್ಯ. ಆದ್ದರಿಂದ ಏಕಮುಖತೆಯನ್ನು ತ್ಯಜಿಸುವುದಕ್ಕೆ ಕರೆ ನೀಡುತ್ತಿದ್ದೀರಿ ಎಂದರೆ ನಿಮಗೆ, ಜನರು ಮಾತನಾಡುವುದು ನಿಜವಾಗಿಯೂ ಇಷ್ಟವಿಲ್ಲ ಎಂದು ಕಾಣುತ್ತದೆ. ಈ ಸಮರ್ಥನೆಯು ಸರಿಯೇ? ಏಕಮುಖತೆಯ ಯಾವ ಸುಳಿವೂ ಇಲ್ಲದಂತೆ ಮಾಡುವುದು ಪ್ರತಿಯೊಬ್ಬರಿಗೂ ಸ್ವಾಭಾವಿಕವಾಗಿ ಕಷ್ಟವೇ. ಜನರು ಯಾವಾಗಲೂ ತಮ್ಮದೇ ಅನುಭವದ ಬೆಳಕಿನಲ್ಲಿ ಪರೀಕ್ಷಿಸಿ ನಿಭಾಯಿಸುತ್ತಾರೆ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಹಾಗೂ ಅವರು ಅನಿವಾರ್ಯವಾಗಿ ಕೆಲವು ವೇಳೆ ಸ್ವಲ್ಪ ಏಕಮುಖತೆಯನ್ನು ಪ್ರದರ್ಶಿಸುತ್ತಾರೆ. ಹೀಗಿದ್ದಾಗ, ಅವರ ಏಕಮುಖತೆಯನ್ನು ಕ್ರಮೇಣವಾಗಿ ಜಯಿಸಿ ಸಮಸ್ಯೆಗಳನ್ನು ಸಾಪೇಕ್ಷವಾಗಿ ಬಹುಮುಖೀಯ ರೀತಿಯಲ್ಲಿ ನೋಡಬೇಕೆಂದು ನಾವು ಅವರಿಗೆ ಹೇಳುವುದು ಬೇಡವೆ? ನನ್ನ ಅಭಿಪ್ರಾಯದಲ್ಲಿ ಹೇಳಬೇಕು. ಇಲ್ಲದಿದ್ದರೆ ನಾವು ಸ್ಥಗಿತಗೊಳ್ಳುತ್ತೇವೆ. ದಿನದಿಂದ ದಿನಕ್ಕೆ ಮತ್ತು ವರ್ಷದಿಂದ ವರ್ಷಕ್ಕೆ ಹೆಚ್ಚೆಚ್ಚು ಜನರು ಸಮಸ್ಯೆಗಳನ್ನು ಸಾಪೇಕ್ಷವಾಗಿ ಬಹುಮುಖೀಯ ರೀತಿಯಲ್ಲಿ ನೋಡಬೇಕು ಎಂದು ನಾವು ಒತ್ತಾಯಿಸದೇ ಇದ್ದಿದ್ದರೆ ಏಕಮುಖತೆಯನ್ನು ಅಂಗೀಕರಿಸಿ ತಿದ್ದುಪಡಿ ಆಂದೋಲನದ ಇಡೀ ಉದ್ದೇಶವನ್ನೇ ವಿರೋಧಾಭಾಸಗೊಳಿಸಿಬಿಡುತ್ತಿದ್ದೆವು. ಏಕಮುಖತೆ ಗತಿತರ್ಕದ ಉಲ್ಲಂಘನೆ. ಗತಿತರ್ಕವನ್ನು ಕ್ರಮೇಣವಾಗಿ ಎಲ್ಲೆಡೆ ಹಬ್ಬಿಸುವುದಕ್ಕೆ ಹಾಗೂ ವೈಜ್ಞಾನಿಕ ಗತಿತಾರ್ಕಿಕ ವಿಧಾನದ ಬಳಕೆಯನ್ನು ಕ್ರಮೇಣವಾಗಿ ಕಲಿತುಕೊಳ್ಳಬೇಕೆಂದು ಪ್ರತಿಯೊಬ್ಬರನ್ನೂ ಕೇಳಿಕೊಳ್ಳುವುದಕ್ಕೆ ನಾವು ಬಯಸುತ್ತೇವೆ. ಈಗ ಪ್ರಕಟಗೊಳ್ಳುತ್ತಿರುವ ಲೇಖನಗಳಲ್ಲಿ ಕೆಲವು

ತೀರಾ ವೈಭವೋಪೇತವಾಗಿದ್ದು ಯಾವುದೇ ತಿರುಳನ್ನಾಗಲೀ, ಸಮಸ್ಯೆಗಳ ಯಾವುದೇ ವಿಶ್ಲೇಷಣೆಯನ್ನಾಗಲೀ ಅಥವಾ ಯಾವುದೇ ತರ್ಕಬದ್ಧ ವಾದಸರಣಿಯನ್ನಾಗಲೀ ಹೊಂದಿಲ್ಲ ಹಾಗೂ ಅವು ಯಾವುದೇ ಯರ್ಥಾಥತೆಯನ್ನು ಮನಗಾಣಿಸುವುದಿಲ್ಲ. ಅಂತಹ ಲೇಖನಗಳು ತೀರಾ ವಿರಳವಾಗಿರಬೇಕು. ಒಂದು ಲೇಖನವನ್ನು ಬರೆಯುವಾಗ ಯಾವಾಗಲೂ "ನಾನೆಷ್ಟು ಬುದ್ಧಿವಂತ" ಎಂದು ಆಲೋಚಿಸುತ್ತಿರಬಾರದು. ಬದಲಾಗಿ ತನ್ನ ಓದುಗರನ್ನು ತನಗೆ ಸರಿಸಮಾನರೆಂದು ಪರಿಭಾವಿಸಬೇಕು. ನೀವು ಕ್ರಾಂತಿಯಲ್ಲಿ ದೀರ್ಘಕಾಲದಿಂದ ಇರಬಹುದು. ಹಾಗಿದ್ದಾಗ್ಯೂ ಕೂಡ, ನೀವು ಏನೋ ಒಂದು ತಪ್ಪನ್ನು ಹೇಳಿದರೆ, ಜನರು ನಿಮ್ಮನ್ನು ಅಲ್ಲಗಳೆಯುತ್ತಾರೆ. ನೀವು ಎಷ್ಟು ಹೆಚ್ಚು ಬುದ್ಧಿಮತ್ತೆ ಪ್ರದರ್ಶಿಸುತ್ತೀರೋ ಅಷ್ಟು ಕಡಿಮೆ ಜನ ಅದರ ಪಕ್ಷ ವಹಿಸುತ್ತಾರೆ. ನಿಮ್ಮ ಲೇಖನಗಳನ್ನು ಓದುವುದಕ್ಕೆ ಅಷ್ಟು ಕಡಿಮೆ ಕಾಳಜಿ ತೋರುತ್ತಾರೆ. ನಾವು ನಮ್ಮ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಬೇಕು. ವಿಚಾರಗಳನ್ನು ಸರಿಯಾಗಿ ವಿಶ್ಲೇಷಿಸಬೇಕು. ಯಥಾರ್ಥತೆಯನ್ನು ಮನಗಾಣಿಸುವ ಲೇಖನಗಳನ್ನು ಬರೆಯಬೇಕು. ಎಂದೆಂದಿಗೂ ಸೋಗು ಹೊಡೆಯುತ್ತಾ ಜನರನ್ನು ಭೀತಿಗೊಳಿಸಬಾರದು.

ಸುದೀರ್ಘ ಲೇಖನವೊಂದರಲ್ಲಿ ಏಕಮುಖತೆಯನ್ನು ತಪ್ಪಿಸಬಹುದು. ಆದರೆ ಕಿರು ಪ್ರಬಂಧವೊಂದರಲ್ಲಿ ಅದು ಅನಿವಾರ್ಯವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ಒಂದು ಕಿರು ಪ್ರಬಂಧವು ಯಾವಾಗಲೂ ಏಕಮುಖವಾಗಿಯೇ ಇರಬೇಕೇನು? ನಾನು ಇದೀಗ ತಾನೆ ಹೇಳಿದಂತೆ, ಏಕಮುಖತೆಯನ್ನು ತಪ್ಪಿಸುವುದು ಸಾಮಾನ್ಯವಾಗಿ ಕಷ್ಟ ಮತ್ತು ಒಂದಷ್ಟು ಪ್ರಮಾಣದಲ್ಲಿ ಅದು ತೆವಳಾಡುತ್ತದೆ. ಅಂದರೆ ಭಾರಿ ಭಯಾನಕವೇನಲ್ಲ. ಪ್ರತಿಯೊಬ್ಬರೂ ಸಮಸ್ಯೆಗಳನ್ನು ಒಂದು ಪರಮ ಪರಿಪೂರ್ಣವಾದ ಬಹುಮುಖೀಯ ವಿಧಾನದಲ್ಲಿ ನೋಡುವ ಅವಶ್ಯಕತೆಯಿದ್ದರೆ ವಿಮರ್ಶೆಗೆ ಅಡಚಣೆಯಾಗುತ್ತದೆ. ಆದರೂ, ಸಮಸ್ಯೆಗಳಿಗೆ ಸಾಪೇಕ್ಷವಾಗಿ ಬಹುಮುಖೀಯ ವಿಧಾನದಲ್ಲಿ ಕೈಹಾಕಬೇಕೆಂದು ಹಾಗೂ ಕಿರು ಪ್ರಬಂಧಗಳೂ ಸೇರಿದಂತೆ, ದೀರ್ಘ ಮತ್ತು ಕಿರು ಲೇಖನಗಳೆರಡರಲ್ಲೂ ಏಕಮುಖತೆಯನ್ನು ತಪ್ಪಿಸಬೇಕೆಂದು ನಾವು ಪ್ರತಿಯೊಬ್ಬರಿಗೂ ಕೇಳೇ ಕೇಳುತ್ತೇವೆ. ಕೆಲವು ನೂರು ಅಥವಾ ಒಂದೆರಡು ಸಾವಿರ ಪದಗಳ ಪ್ರಬಂಧವೊಂದರಲ್ಲಿ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಹೇಗೆ ಸಾಧ್ಯ ಎಂದು ಕೆಲವರು ವಾದಿಸುತ್ತಾರೆ. ಯಾಕಾಗುವುದಿಲ್ಲ, ಲು ಷುನ್ ಮಾಡಿರಲಿಲ್ಲವೇ? ವಿಶ್ಲೇಷಣಾ ವಿಧಾನ ಗತಿತಾರ್ಕಿಕವಾದದ್ದು. ವಿಶ್ಲೇಷಣೆ ಎಂದು ನಾವು ಹೇಳುವುದರ ಅರ್ಥ ವಸ್ತುಗಳಲ್ಲಿನ ವೈರುಧ್ಯಗಳನ್ನು ವಿಶ್ಲೇಷಿಸುವುದು ಎಂದು. ಜೀವನದ ನಿಕಟ ಜ್ಞಾನವಿಲ್ಲದೆ ಮತ್ತು ಚಾಲ್ತಿಯಲ್ಲಿರುವ ವೈರುಧ್ಯಗಳ ನೈಜ ತಿಳುವಳಿಕೆಯಿಲ್ಲದೆ ಅವಿಚ್ಛಿನ್ನ ವಿಶ್ಲೇಷಣೆ ಅಸಾಧ್ಯ. ಲು ಷುನ್‌ನ ಕೊನೆಯ ಪ್ರಬಂಧಗಳು ಎಷ್ಟೊಂದು ಮರ್ಮಭೇದಕ ಮತ್ತು ಶಕ್ತಿಯುತವಾಗಿವೆ ಹಾಗೂ ಆಗಲೇ ಎಷ್ಟೊಂದು ಏಕಮುಖತೆಯಿಂದ ಮುಕ್ತವಾಗಿವೆ. ಏಕೆಂದರೆ ಪ್ರಮುಖವಾಗಿ ಅವತ್ತೇ ಅವನು ಗತಿತರ್ಕವನ್ನು ಗ್ರಹಿಸಿದ್ದ. ಲೆನಿನ್‌ರ ಕೆಲವು ಲೇಖನಗಳನ್ನೂ ಸಹ ಕಿರು ಪ್ರಬಂಧಗಳು ಎಂದು ಕರೆಯಬಹುದು. ಅವು ವಿಡಂಬನಶೀಲವಾಗಿ ಮತ್ತು ಕಟುವಾಗಿ ಇವೆ. ಆದರೆ ಏಕಮುಖತೆಯಿಲ್ಲ. ಲು ಷುನ್‌ನ ಹೆಚ್ಚುಕಡಿಮೆ ಎಲ್ಲಾ ಪ್ರಬಂಧಗಳೂ ಶತೃವನ್ನು ಕುರಿತು ಇದ್ದವು. ಲು ಷುನ್ ರೀತಿಯ ಪ್ರಬಂಧವನ್ನು ಜನಶ್ರೇಣಿಗಳೊಳಗಿನ ತಪ್ಪು ಮತ್ತು ನ್ಯೂನತೆಗಳ ವಿರುದ್ಧ ಬಳಸಬಹುದೇ? ಬಳಸಬಹುದು ಎಂದು ನನಗನ್ನಿಸುತ್ತದೆ. ಖಂಡಿತವಾಗಿಯೂ ನಾವು ಶತೃ ಮತ್ತು ನಮ್ಮ ನಡುವೆ ವ್ಯತ್ಯಾಸವನ್ನು ಮಾಡಲೇಬೇಕು ಹಾಗೂ ಸಂಗಾತಿಗಳೆಡೆಗೆ ವೈರತ್ವಪೂರಿತ ನಿಲುವನ್ನು ಅನುಸರಿಸುವುದನ್ನಾಗಲಿ, ನಾವು ಅವರ ಭಾವೀ ಶತೃಗಳಂತೆ ವರ್ತಿಸುವುದನ್ನಾಗಲೀ ಮಾಡಲೇಬಾರದು. ನಾವು ಮಾತನಾಡುವಲ್ಲಿ, ಜನರ ಧ್ಯೇಯವನ್ನು ರಕ್ಷಿಸುವ ಮತ್ತು ಅವರ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವ ಉತ್ಕಟ ಹಂಬಲವಿರಬೇಕು ಹಾಗೂ ಒಬ್ಬರ ವ್ಯವಹಾರ ವಿಧಾನವನ್ನು ಅವಹೇಳನ ಮಾಡುವುದಾಗಲಿ ಅಥವಾ ಅದನ್ನು ದೂಷಣೆ ಮಾಡುವುದಾಗಲೀ ಇರಲೇಬಾರದು.

ಒಬ್ಬನು ಬರೆಯುವುದಕ್ಕೇನೇ ಧೈರ್ಯ ತಾಳದಿದ್ದರೆ ಹೇಗೆ? ತಮಗೆ ಹೇಳುವುದಕ್ಕೆ ಏನೋ ಒಂದಷ್ಟು ಹೇಳುವುದಕ್ಕೆ ಇದ್ದಾಗಲೂ ತಾವು ಜನರಿಗೆ ನೋವುಂಟು ಮಾಡಬಾರದೆಂದು ಮತ್ತು ತಾವು ವಿಮರ್ಶೆಗೊಳಗಾಗಬಾರದೆಂದು ಬರೆಯುವುದಕ್ಕೆ ಧೈರ್ಯ ಬರುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಅಂತಹ ಚಿಂತೆಗಳನ್ನು ಬಿಸಾಡಿಬಿಡುವುದಕ್ಕೆ ಸಾಧ್ಯವಿದೆ ಎಂದು ನನಗನ್ನಿಸುತ್ತದೆ. ನಮ್ಮದು ಪ್ರಜಾತಾಂತ್ರಿಕ ಜನತಾ ಸರ್ಕಾರ. ಇದು ಜನಸೇವೆಗಾಗಿ ಬರೆಯುವುದಕ್ಕೆ ಅನುಕೂಲವಿರುವ ಪರಿಸರವನ್ನು ಒದಗಿಸುತ್ತದೆ. 'ನೂರು ಹೂವುಗಳು ಅರಳಲಿ, ನೂರು ಚಿಂತನಾ ಪಂಥಗಳು ಸಂಘರ್ಷಿಸಲಿ' ಎಂಬ ನೀತಿಯು ವಿಜ್ಞಾನ ಮತ್ತು ಕಲೆಗಳ ಅರಳಿಕೆಗೆ ಹೆಚ್ಚುವರಿ ಭರವಸೆಗಳನ್ನು ಕೊಡುತ್ತದೆ. ನೀವು ಹೇಳುವುದು ಸರಿಯಾಗಿದ್ದಲ್ಲಿ ಯಾವ ವಿಮರ್ಶೆಗೂ ಹೆದರುವ ಅಗತ್ಯವಿಲ್ಲ. ಚರ್ಚೆಯ ಮೂಲಕ ನೀವು ನಿಮ್ಮ ಸರಿಯಾದ ಅಭಿಪ್ರಾಯಗಳನ್ನು ಮತ್ತಷ್ಟು ವಿವರಿಸಬಹುದು. ಒಂದುವೇಳೆ ನೀವು ಹೇಳುವುದು ತಪ್ಪಾಗಿದ್ದರೆ, ವಿಮರ್ಶೆಯು ನಿಮ್ಮ ತಪ್ಪುಗಳನ್ನು ಸರಿತಿದ್ದಿಕೊಳ್ಳಲು ನಿಮಗೆ ಸಹಕರಿಸುತ್ತದೆ. ಇದು ಕೆಟ್ಟದ್ದೇನೂ ಅಲ್ಲ. ನಮ್ಮ ಸಮಾಜದಲ್ಲಿ ರಣೋತ್ಸಾಹಿ ಕ್ರಾಂತಿಕಾರಿ ವಿಮರ್ಶೆ ಮತ್ತು ಪ್ರತಿ ವಿಮರ್ಶೆಗಳು ವೈರುಧ್ಯಗಳನ್ನು ಬಯಲುಗೊಳಿಸಿ ಬಗೆಹರಿಸುವುದಕ್ಕೆ ವಿಜ್ಞಾನ ಮತ್ತು ಕಲೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಹಾಗೂ ನಮ್ಮೆಲ್ಲಾ ಕೆಲಸದಲ್ಲೂ ಯಶಸ್ಸನ್ನು ಖಾತ್ರಿಪಡಿಸುವುದಕ್ಕೆ ಬಳಸುವ ಆರೋಗ್ಯಪೂರ್ಣ ವಿಧಾನವಾಗಿದೆ.

ಏಳನೆಯದಾಗಿ, 'ಹರವಾಗಿ ತೆರೆಯಬೇಕೆ ಅಥವಾ ಸೀಮಿತಗೊಳಿಸಬೇಕೆ' ಇದು ನೀತಿಗೆ ಸಂಬಂಧಿಸಿದ ಪ್ರಶ್ನೆ. 'ನೂರು ಹೂವುಗಳು ಅರಳಲಿ, ನೂರು ಚಿಂತನಾ ಪಂಥಗಳು ಸಂಘರ್ಷಿಸಲಿ' ಎಂಬುದು ಒಂದು ದೀರ್ಘಕಾಲೀನ ಮತ್ತು ಅಂತೆಯೆ ಒಂದು ಮೂಲಭೂತವಾದ ನೀತಿ. ಇದು ಕೇವಲ ಒಂದು ತಾತ್ಕಾಲಿಕವಾದ ನೀತಿಯಲ್ಲ. ಚರ್ಚೆಯಲ್ಲಿ ಸಂಗಾತಿಗಳು 'ಸೀಮಿತತೆಗೆ' ಸಮ್ಮತಿಯನ್ನು ವ್ಯಕ್ತಗೊಳಿಸಿದರು. ಈ ಅಭಿಪ್ರಾಯವು ಸರಿಯಾದುದೆಂದು ನನಗನ್ನಿಸುತ್ತದೆ. ನಾವು 'ಹರವಾಗಿ ತೆರೆಯಬೇಕೆ' ವಿನಃ 'ಸೀಮಿತ'ಗೊಳಿಸಬಾರದು ಎಂಬುದು ಪಕ್ಷದ ಕೇಂದ್ರ ಸಮಿತಿಯ ಅಭಿಪ್ರಾಯವಾಗಿದೆ.

ನಮ್ಮ ದೇಶವನ್ನು ಮುನ್ನಡೆಸುವಲ್ಲಿ ಎರಡು ಪರ್ಯಾಯ ವಿಧಾನಗಳನ್ನು ಅಥವಾ ಬೇರೆ ಮಾತಿನಲ್ಲಿ ಹೇಳುವುದಾದರೆ ಎರಡು ಪರ್ಯಾಯ ನೀತಿಗಳನ್ನು ಅಳವಡಿಸಬಹುದು, ಹರವಾಗಿ ತೆರೆಯುವುದು ಅಥವಾ ಸೀಮಿತಗೊಳಿಸುವುದು. ಹರವಾಗಿ ತೆರೆಯುವುದು ಎಂಬುದರ ಅರ್ಥ ಎಲ್ಲಾ ಜನರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಅಭಿವ್ಯಕ್ತಗೊಳಿಸುವುದಕ್ಕೆ ಬಿಡುವುದು. ಇದರಿಂದಾಗಿ ಅವರು ಮಾತನಾಡುವುದಕ್ಕೆ ಧೈರ್ಯತಾಳುತ್ತಾರೆ. ಚರ್ಚೆ ಮಾಡುವುದಕ್ಕೆ ಧೈರ್ಯ ತಾಳುತ್ತಾರೆ ಎಂದು, ತಪ್ಪು ಅಭಿಪ್ರಾಯಗಳಿಗೆ ಮತ್ತು ಯಾವುದೇ ವಿಷಕಾರಿಯಾದ ವಿಚಾರಕ್ಕೆ ಹೆದರದಿರುವುದು ಎಂದು, ಭಿನ್ನ ದೃಷ್ಟಿಕೋನಗಳನ್ನು ಹೊಂದಿದ ಜನರ ನಡುವೆ ತರ್ಕ ಮತ್ತು ವಿಮರ್ಶೆಗಳನ್ನು ಪ್ರೋತ್ಸಾಹಿಸುವುದು ಎಂದು, ವಿಮರ್ಶೆ ಮತ್ತು ಪ್ರತಿ ವಿಮರ್ಶೆಗಳೆರಡರ ಸ್ವಾತಂತ್ರ್ಯಕ್ಕೂ ಅನುವು ಮಾಡಿಕೊಡುವುದು ಎಂದು, ತಪ್ಪು ಅಭಿಪ್ರಾಯ ಅದುಮದೆ ತರ್ಕಬದ್ಧವಾಗಿ ವಾದಿಸುವ ಮೂಲಕ ಜನರಿಗೆ ಮನಗಾಣಿಸುವುದು ಎಂದು ಅರ್ಥ. ಸೀಮಿತಗೊಳಿಸುವುದು ಎಂಬುದರ ಅರ್ಥ, ಜನರು ಭಿನ್ನಭಿನ್ನ ಅಭಿಪ್ರಾಯಗಳನ್ನು ಪ್ರಕಟಪಡಿಸದಂತೆ ಮತ್ತು ತಪ್ಪು ಚಿಂತನೆಗಳನ್ನು

ಅಭಿವ್ಯಕ್ತಪಡಿಸದಂತೆ ನಿಷೇಧಿಸುವುದು ಹಾಗೂ ಒಂದು ವೇಳೆ ಜನರಿಗೆ ಹಾಗೆ ಮಾಡಿದರೆ 'ಅವರನ್ನು ಒಂದೇ ಹೊಡೆತದಲ್ಲಿ ಮುಗಿಸಿಹಾಕುವುದು' ಎಂದರ್ಥ. ಇದು ವೈರುಧ್ಯಗಳನ್ನು ಉಲ್ಬಣಗೊಳಿಸುವ ವಿಧಾನವೇ ಹೊರತು ಅವುಗಳನ್ನು ನಿವಾರಿಸುವ ವಿಧಾನ ಅಲ್ಲ. ಹರವಾಗಿ ತೆರೆಯುವುದು ಅಥವಾ ಸೀಮಿತಗೊಳಿಸುವುದು. ಈ ಎರಡು ನೀತಿಗಳಲ್ಲಿ ನಾವು ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು. ನಾವು ಮೊದಲನೆಯದನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಏಕೆಂದರೆ, ಇದು ನಮ್ಮ ದೇಶವನ್ನು ಸದೃಢಗೊಳಿಸುವುದಕ್ಕೆ ಮತ್ತು ನಮ್ಮ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಹಕರಿಸುವ ನೀತಿಯಾಗಿದೆ.

ಹಲವಾರು ಮಿಲಿಯನ್ ಬುದ್ಧಿಜೀವಿಗಳೊಂದಿಗೆ ಐಕ್ಯಗೊಳ್ಳುವುದಕ್ಕೆ ಮತ್ತು ಅವರ ಪ್ರಸ್ತುತ ದೃಷ್ಟಿಕೋನವನ್ನು ಬದಲಾಯಿಸುವುದಕ್ಕೆ ನಾವು 'ಹರವಾಗಿ ತೆರೆಯುವ ನೀತಿ'ಯನ್ನು ಬಳಸುವುದಕ್ಕೆ ಸಿದ್ಧರಾಗಿದ್ದೇವೆ. ನಾನು ಈ ಮೇಲೆ ಹೇಳಿದಂತೆ, ನಮ್ಮ ದೇಶದಲ್ಲಿನ ಅಪಾರ ಸಂಖ್ಯೆಯ ಬುದ್ಧಿಜೀವಿಗಳು ಪ್ರಗತಿ ಸಾಧಿಸಲು ಮತ್ತು ತಮ್ಮನ್ನು ತಾವು ಪುನರ್‌ರೂಪಿಸಿಕೊಳ್ಳಲು ಬಯಸುತ್ತಾರೆ. ಅವರು ತಮ್ಮನ್ನು ಪುನರ್‌ರೂಪಿಸಿಕೊಳ್ಳುವುದಕ್ಕೆ ಸಂಪೂರ್ಣ ಸಮರ್ಥರಾಗಿದ್ದಾರೆ. ಈ ಸಂಬಂಧದಲ್ಲಿ ನಾವು ಅಳವಡಿಸುವ ನೀತಿಯು ಅಮೋಘ ಪಾತ್ರವನ್ನು ನಿರ್ವಹಿಸುತ್ತದೆ. ಬುದ್ಧಿಜೀವಿಗಳ ಪ್ರಶ್ನೆಯು ಎಲ್ಲಕ್ಕಿಂತ ಮಿಗಿಲಾಗಿ ಒಂದು ಸೈದ್ಧಾಂತಿಕ ಪ್ರಶ್ನೆ ಹಾಗೂ ಸೈದ್ಧಾಂತಿಕ ಪ್ರಶ್ನೆಗಳನ್ನು ಬಗೆಹರಿಸುವುದಕ್ಕೆ ಒರಟು ಮತ್ತು ದರ್ಪದ ಕ್ರಮಗಳನ್ನು ಆಶ್ರಯಿಸುವುದು ಪ್ರಯೋಜನಕಾರಿಯಾಗಿ ಅಲ್ಲ, ಬದಲಾಗಿ ಹಾನಿಕಾರಕವಾಗಿರುತ್ತದೆ. ಬುದ್ಧಿಜೀವಿಗಳ ಪುನರ್‌ರೂಪಿಕೆ ಅದರಲ್ಲೂ ಮುಖ್ಯವಾಗಿ ಅವರ ಪ್ರಪಂಚ ದೃಷ್ಟಿಕೋನವನ್ನು ಬದಲಾಯಿಸುವುದು ದೀರ್ಘ ಕಾಲಾವಧಿಯ ಅಗತ್ಯವಿರುವ ಒಂದು ಪ್ರಕ್ರಿಯೆ. ಸೈದ್ಧಾಂತಿಕ ಪುನರ್‌ರೂಪಿಕೆಯು ದೀರ್ಘಕಾಲಿಕ, ತಾಳ್ಮೆಯ ಮತ್ತು ಪರಿಶ್ರಮಯುತ ಕೆಲಸವನ್ನು ಒಳಗೊಂಡಿರುತ್ತದೆ ಎಂಬುದನ್ನು ನಮ್ಮ ಸಂಗಾತಿಗಳು ಅರ್ಥ ಮಾಡಿಕೊಳ್ಳಬೇಕು. ದಶಕಗಳ ಬದುಕಿನಲ್ಲಿ ರೂಪುಗೊಂಡ ಜನರ ಸಿದ್ಧಾಂತವನ್ನು ಕೆಲವು ಉಪನ್ಯಾಸಗಳನ್ನು ನೀಡುವ ಮೂಲಕ ಅಥವಾ ಕೆಲವು ಸಭೆಗಳನ್ನು ನಡೆಸುವ ಮೂಲಕ ಬದಲಾಯಿಸುವುದಕ್ಕೆ ಪ್ರಯತ್ನಿಸಬಾರದು. ಅವರನ್ನು ಮನವೊಲಿಸುವ ಒಂದೇ ವಿಧಾನ ಮನವರಿಕೆ ಮಾಡುವುದು. ಬಲತ್ಕಾರ ಅಲ್ಲ. ಬಲತ್ಕಾರವು ಅವರನ್ನು ಎಂದೂ ಮನವೊಲಿಸುವುದಿಲ್ಲ. ಅವರನ್ನು ಬಲವಂತವಾಗಿ ಮನವೊಲಿಸುವುದಕ್ಕೆ ಪ್ರಯತ್ನಿಸುವುದು ನಿಸ್ಸಂದಿಗ್ಧವಾಗಿ ಕೆಲಸಕ್ಕೆ ಬಾರದು. ಈ ರೀತಿಯ ವಿಧಾನವು ಶತೃವಿನೊಂದಿಗೆ ವ್ಯವಹರಿಸುವುದಕ್ಕೆ ಸಮ್ಮತವಾದುದು. ಆದರೆ, ಸಂಗಾತಿಗಳೊಂದಿಗೆ ಅಥವಾ ಸ್ನೇಹಿತರೊಂದಿಗೆ ವ್ಯವಹರಿಸುವುದಕ್ಕೆ ಖಡಾಖಂಡಿತವಾಗಿಯೂ ನಿಷಿದ್ಧವಾದುದು. ಇತರರನ್ನು ಹೇಗೆ ಮನವೊಲಿಸಬೇಕೆಂದು ನಮಗೆ ಗೊತ್ತಿಲ್ಲದಿದ್ದರೆ ಏನು ಮಾಡಬೇಕು? ಹಾಗಿದ್ದರೆ ನಾವು ಕಲಿಯಬೇಕಾಗುತ್ತದೆ. ಚರ್ಚೆ ಮತ್ತು ತರ್ಕದ ಮೂಲಕ ನಾವು ದೋಷಪೂರಿತ ಚಿಂತನೆಗಳನ್ನು ಗೆಲ್ಲುವುದಕ್ಕೆ ಕಲಿಯಲೇಬೇಕು.

'ನೂರು ಹೂವುಗಳನ್ನು ಅರಳಲಿಕ್ಕೆ ಬಿಡುವುದು' ಎಂಬುದು ಕಲೆಗಳನ್ನು ಬೆಳೆಸುವುದಕ್ಕಾಗಿನ ವಿಧಾನ ಹಾಗೂ 'ನೂರು ಚಿಂತನಾ ಪಂಥಗಳನ್ನು ಸಂಘರ್ಷಿಸುವುದಕ್ಕೆ ಬಿಡುವುದು' ಎಂಬುದು ವಿಜ್ಞಾನವನ್ನು ಬೆಳೆಸುವುದಕ್ಕಾಗಿನ ವಿಧಾನ. ಈ ನೀತಿಯು ಕೇವಲ ವಿಜ್ಞಾನ ಮತ್ತು ಕಲೆಗಳನ್ನು ಬೆಳೆಸುವುದಕ್ಕೆ ಮಾತ್ರ ಒಳ್ಳೆಯ ವಿಧಾನ ಅಲ್ಲ, ಬದಲಾಗಿ, ವಿಸ್ತೃತ ಅಳವಡಿಕೆಯನ್ನು ಅನುಸರಿಸಿದ್ದೇ ಆದಲ್ಲಿ ನಮ್ಮ ಎಲ್ಲಾ ಕೆಲಸವನ್ನು ಮಾಡುವುದಕ್ಕೆ ಒಂದು ಒಳ್ಳೆಯ ವಿಧಾನವಾಗುತ್ತದೆ. ಇದು ನಮಗೆ ಅತ್ಯಂತ ಕಡಿಮೆ ತಪ್ಪುಗಳನ್ನು ಮಾಡುವುದಕ್ಕೆ ಸಹಕರಿಸಬಲ್ಲದು. ನಮಗೆ ಅರ್ಥವಾಗದ ಅನೇಕ ವಿಚಾರಗಳಿವೆ. ಇದರಿಂದಾಗಿಯೇ ಅವುಗಳನ್ನು ನಿಭಾಯಿಸುವುದಕ್ಕೆ ಅಸಮರ್ಥರಾಗಿದ್ದೇವೆ. ಆದರೆ ಚರ್ಚೆ ಮತ್ತು ಸಂಘರ್ಷದ ಮೂಲಕ ಅವುಗಳನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ ಮತ್ತು ಅವುಗಳನ್ನು ಹೇಗೆ ನಿಭಾಯಿಸಬೇಕೆಂದು ಕಲಿತುಕೊಳ್ಳುತ್ತೇವೆ. ಭಿನ್ನ ಅಭಿಪ್ರಾಯಗಳ ನಡುವಿನ ಸಂಘರ್ಷದ ಮೂಲಕವೇ ಸತ್ಯ ಬೆಳೆಯುತ್ತದೆ. ಇದೇ ವಿಧಾನವನ್ನು ವಿಷಕಾರಿಯಾದುದಕ್ಕೆ ಮತ್ತು ಮಾರ್ಕ್ಸ್‌ವಾದಿ ವಿರೋಧಿಯಾದುದಕ್ಕೆ ಸಂಬಂಧಪಟ್ಟಂತೆಯೂ ಅನ್ವಯಿಸಬಹುದು. ಏಕೆಂದರೆ ಇದರ ವಿರುದ್ಧದ ಸಂಘರ್ಷದಲ್ಲಿಯೇ ಮಾರ್ಕ್ಸ್‌ವಾದವು ಬೆಳೆಯುತ್ತದೆ. ಇದು ವಿರುದ್ಧಾಂಶಗಳ ಸಂಘರ್ಷದ ಮುಖಾಂತರದ ಬೆಳವಣಿಗೆ. ಗತಿತರ್ಕಕ್ಕೆ ಅನುಗುಣವಾದ ಬೆಳವಣಿಗೆ.

ಸತ್ಯವಾದದ್ದನ್ನು, ಒಳ್ಳೆಯದನ್ನು ಮತ್ತು ಸುಂದರವಾದದ್ದನ್ನು ಜನರು ಯುಗಾಂತರಗಳಿಂದ ಚರ್ಚಿಸಿಲ್ಲವೇ? ಅವುಗಳ ವಿರುದ್ಧಾಂಶಗಳೆಂದರೆ ಸುಳ್ಳಾದದ್ದು, ಕೆಟ್ಟದ್ದು ಮತ್ತು ಕುರೂಪವಾದುದು. ಮೊದಲನೆಯದು ಎರಡನೆಯದಿಲ್ಲದೆ ಇರುವುದಿಲ್ಲ. ಸತ್ಯವು ಸುಳ್ಳಿನ ವಿರುದ್ಧ ನಿಲ್ಲುತ್ತದೆ. ಪ್ರಕೃತಿಯಂತೆಯೇ ಸಮಾಜದಲ್ಲೂ ಪ್ರತಿಯೊಂದು ವಸ್ತುವೂ ಏಕರೂಪವಾಗಿ ತನ್ನ ಭಿನ್ನ ಅಂಶಗಳಾಗಿ ಒಡೆಯುತ್ತದೆ. ಭಿನ್ನವಾದ ನಿರ್ದಿಷ್ಟ ಪರಿಸ್ಥಿತಿಗಳಡಿಯಲ್ಲಿ ಕೇವಲ ಹುರುಳು ಮತ್ತು ರೂಪಗಳಲ್ಲಿ ಮಾತ್ರ ಭಿನ್ನತೆಗಳಿರುತ್ತವೆ. ಯಾವಾಗಲೂ ಸುಳ್ಳು ಮತ್ತು ಕೂರೂಪ ವಿದ್ಯಮಾನವಿರುತ್ತದೆ. ಸರಿ ಮತ್ತು ತಪ್ಪುಗಳಂತಹ, ಒಳ್ಳೆಯ ಮತ್ತು ಕೆಡಕುಗಳಂತಹ, ಸುಂದರ ಮತ್ತು ಕುರೂಪಗಳಂತಹ ವಿರುದ್ಧಾಂಶಗಳು ಯಾವಾಗಲೂ ಇರುತ್ತವೆ. ಇದು ಸುಗಂಧಭರಿತ ಸುಮಗಳ ಮತ್ತು ವಿಷಕಾರಿ ಕಳೆಗಳ ವಿಚಾರದಲ್ಲೂ ಸತ್ಯ. ಅವುಗಳ ನಡುವಿನ ಸಂಬಂಧ ವಿರುದ್ಧಾಂಶಗಳ ಐಕ್ಯತೆ ಮತ್ತು ಸಂಘರ್ಷದ ಸಂಬಂಧ. ವೈದೃಶ್ಯವಿಲ್ಲದೆ ಭೇದಗ್ರಹಣವಿರಲಾರದು. ಭೇದಗ್ರಹಣ ಮತ್ತು ಸಂಘರ್ಷವಿಲ್ಲದೆ ಬೆಳವಣಿಗೆ ಇರಲಾರದು. ಸತ್ಯವು ಸುಳ್ಳಿನೊಂದಿಗಿನ ತನ್ನ ಸಂಘರ್ಷದ ಮೂಲಕವೇ ಬೆಳೆಯುತ್ತದೆ. ಮಾರ್ಕ್ಸ್‌ವಾದ ಬೆಳೆಯುವುದು ಹೀಗೆಯೇ. ಮಾರ್ಕ್ಸ್‌ವಾದವು ಬಂಡವಾಳಶಾಹಿ ಮತ್ತು ಪುಟ್ಟ ಬಂಡವಾಳಶಾಹಿ ಸಿದ್ಧಾಂತದೊಂದಿಗಿನ ಸಂಘರ್ಷದಲ್ಲಿಯೇ ಬೆಳೆಯುತ್ತದೆ. ಅದು ಬೆಳೆಯುವುದು ಸಂಘರ್ಷದ ಮೂಲಕ ಮಾತ್ರವೆ.

ನಾವು 'ಹರವಾಗಿ ತೆರೆಯುವ' ನೀತಿಯ ಪರವಾಗಿದ್ದೇವೆ. ಇದು ಈವರೆಗೆ ತುಂಬಾ ಜಾಸ್ತಿ ಆಗಿದೆ ಎನ್ನುವುದಕ್ಕಿಂತ ತುಂಬಾ ಕಡಿಮೆಯಾಗಿದೆ ಎನ್ನುವುದೇ ಯುಕ್ತ. ಹರವಾಗಿ ತೆರೆಯುವುದಕ್ಕೆ ನಾವು ಹೆದರಲೇಬಾರದು. ವಿಮರ್ಶೆ ಮತ್ತು ವಿಷಕಾರಿ ಕಳೆಗಳಿಗೂ ಕೂಡ ನಾವು ಹೆದರಬಾರದು. ಮಾರ್ಕ್ಸ್‌ವಾದ ಒಂದು ವೈಜ್ಞಾನಿಕ ಸತ್ಯ. ಅದು ಯಾವ ವಿಮರ್ಶೆಗೂ ಹೆದರುವುದಿಲ್ಲ. ಮತ್ತು ವಿಮರ್ಶೆಯಿಂದ ಅದನ್ನು ಸೋಲಿಸಲಾಗುವುದಿಲ್ಲ. ಕಮ್ಯೂನಿಸ್ಟ್ ಪಕ್ಷ ಮತ್ತು ಜನತಾ ಸರ್ಕಾರಕ್ಕೂ ಇದು ಅನ್ವಯಿಸುತ್ತದೆ. ಅವು ಯಾವ ವಿಮರ್ಶೆಗಳಿಗೂ ಹೆದರುವುದಿಲ್ಲ ಮತ್ತು ವಿಮರ್ಶೆಯಿಂದ ಅವುಗಳನ್ನು ಸೋಲಿಸಲಾಗುವುದಿಲ್ಲ. ತಪ್ಪಾದ ವಿಚಾರಗಳು ಯಾವಾಗಲೂ ಇದ್ದೇ ಇರುತ್ತವೆ ಮತ್ತು ಅವುಗಳಿಗೆ ಹೆದರುವಂತಹದ್ದೇನಿಲ್ಲ. ಇತ್ತೀಚೆಗೆ, ಅನೇಕ ದೆವ್ವ ಭೂತಗಳನ್ನು ರಂಗಸ್ಥಳದ ಮೇಲೆ ತೋರಿಸಲಾಯಿತು. ಇದನ್ನು ನೋಡಿ ಕೆಲವು ಸಂಗಾತಿಗಳು ತುಂಬಾ ಆಂತಕಕ್ಕೊಳಗಾದರು. ನನ್ನ ಅಭಿಪ್ರಾಯದಲ್ಲಿ, ಈ ಸಣ್ಣಪುಟ್ಟ ವಿಚಾರದಿಂದ ಭಾರಿ ತೊಂದರೆಯೇನಿಲ್ಲ. ಕೆಲವೇ ದಶಕಗಳಲ್ಲಿ ಅಂತಹ ದೆವ್ವ, ಭೂತಗಳು ರಂಗಸ್ಥಳದಿಂದ ಒಟ್ಟಾರೆಯಾಗಿ ಕಣ್ಮರೆಯಾಗುತ್ತವೆ. ನೀವು ಅವುಗಳನ್ನು ನೋಡಬೇಕೆಂದು ಬಯಸಿದರೂ ನೋಡಲಾಗುವುದಿಲ್ಲ. ನಾವು ಸರಿಯಾದುದನ್ನು ಪ್ರೋತ್ಸಾಹಿಸಬೇಕು ಹಾಗೂ ತಪ್ಪಾದುದನ್ನು ವಿರೋಧಿಸಬೇಕು. ಆದರೆ ಒಂದು ವೇಳೆ ಜನರು ದೋಷಪೂರಿತ ವಿಚಾರಗಳ ಒಳಸೇರಿದರೆ ಗಾಬರಿಗೊಳ್ಳಬಾರದು. ಜನರು ವಿಕೃತ

ಮತ್ತು ಕೆಟ್ಟ ಸಂಗತಿಗಳೊಂದಿಗೆ ಹಾಗೂ ದೋಷಪೂರಿತ ಚಿಂತನೆಗಳೊಂದಿಗೆ ಯಾವುದೇ ಸಂಪರ್ಕವಿಟ್ಟುಕೊಳ್ಳುವುದನ್ನು ನಿಷೇಧಿಸುವುದಕ್ಕಾಗಿ ಅಥವಾ ಅವರು ರಂಗಸ್ಥಳದ ಮೇಲಿನ ದೆವ್ವ ಭೂತಗಳನ್ನು ನೋಡುವುದನ್ನು ನಿಷೇಧಿಸುವುದಕ್ಕಾಗಿ ಕೇವಲ ಆಡಳಿತಾತ್ಮಕ ಆದೇಶಗಳನ್ನು ಹೊರಡಿಸುವುದು ಯಾವ ಸಮಸ್ಯೆಯನ್ನೂ ಬಗೆಹರಿಸುವುದಿಲ್ಲ. ಖಂಡಿತ ಅಂತಹ ವಿಚಾರಗಳ ಹರಡಿಕೆಯನ್ನು ನಾನು ಪ್ರತಿಪಾದಿಸುತ್ತಿಲ್ಲ. 'ಈ ಸಣ್ಣಪುಟ್ಟ ವಿಚಾರದಿಂದ ಭಾರಿ ತೊಂದರೆಯೇನಿಲ್ಲ' ಎಂದಷ್ಟೇ ನಾನು ಹೇಳುತ್ತೇನೆ. ದೋಷಪೂರಿತ ವಿಚಾರಗಳು ಇರುವುದು ಸೋಜಿಗವೇನಲ್ಲ. ಅಂತೆಯೇ ಇದು ಅಂಜಿಕೆಗೆ ಯಾವುದೇ ಕಾರಣವಾಗಬೇಕಿಲ್ಲ. ವಾಸ್ತವದಲ್ಲಿ, ಅವುಗಳ ವಿರುದ್ಧ ಇನ್ನೂ ಚೆನ್ನಾಗಿ ಹೋರಾಡುವುದನ್ನು ಕಲಿಯುವುದಕ್ಕೆ ಜನರಿಗೆ ಅದು ಸಹಕರಿಸುತ್ತದೆ. ಮಹಾನ್ ಚಂಡಮಾರುತಗಳಿಗೂ ಕೂಡ ಹೆದರಬಾರದು. ಮಹಾನ್ ಚಂಡಮಾರುತಗಳ ನಡುವೆಯೇ ಮಾನವ ಸಮಾಜ ಪ್ರಗತಿ ಕಾಣುತ್ತದೆ.

ನಮ್ಮ ದೇಶದಲ್ಲಿ ಬಂಡವಾಳಶಾಹಿ ಮತ್ತು ಪುಟ್ಟ ಬಂಡವಾಳಶಾಹಿ ಸಿದ್ಧಾಂತ, ಮಾರ್ಕ್ಸ್‌ವಾದಿ ವಿರೋಧಿ ಸಿದ್ಧಾಂತ ಸುದೀರ್ಘ ಕಾಲದತನಕ ಅಸ್ತಿತ್ವದಲ್ಲಿ ಮುಂದುವರಿಯುತ್ತವೆ. ಮೂಲಭೂತವಾಗಿ, ಸಮಾಜವಾದಿ ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ಸ್ಥಾಪಿಸಲಾಗಿದೆ. ಉತ್ಪಾದನಾ ಸಾಧನಗಳ ಒಡೆತನವನ್ನು ಪರಿವರ್ತಿಸುವಲ್ಲಿ ನಾವು ಮೂಲಭೂತ ವಿಜಯವನ್ನು ಗೆದ್ದಿದ್ದೇವೆ. ಆದರೆ ರಾಜಕೀಯ ಮತ್ತು ಸೈದ್ಧಾಂತಿಕ ರಂಗಗಳಲ್ಲಿ ಪರಿಪೂರ್ಣ ವಿಜಯವನ್ನು ನಾವು ಇನ್ನೂ ಗೆದ್ದಿಲ್ಲ. ಸೈದ್ಧಾಂತಿಕ ರಂಗದಲ್ಲಿ, ಕಾರ್ಮಿಕ ವರ್ಗ ಮತ್ತು ಬಂಡವಾಳಶಾಹಿಗಳ ನಡುವಿನ ಸಂಘರ್ಷದಲ್ಲಿ ಯಾರು ಗೆಲ್ಲುತ್ತಾರೆ ಎಂಬ ಪ್ರಶ್ನೆ ನಿಜವಾಗಿಯೂ ಇನ್ನೂ ಬಗೆಹರಿದಿಲ್ಲ. ಬಂಡವಾಳಶಾಹಿ ಮತ್ತು ಪುಟ್ಟ ಬಂಡವಾಳಶಾಹಿ ಸಿದ್ಧಾಂತದ ವಿರುದ್ಧ ನಾವಿನ್ನೂ ಸುದೀರ್ಘ ಸಂಘರ್ಷ ನಡೆಸಬೇಕಿದೆ. ಇದನ್ನು ಅರ್ಥ ಮಾಡಿಕೊಳ್ಳದಿರುವುದು ಮತ್ತು ಸೈದ್ಧಾಂತಿಕ ಸಂಘರ್ಷವನ್ನು ಕೈಬಿಡುವುದು ತಪ್ಪು. ಎಲ್ಲಾ ದೋಷಪೂರಿತ ಚಿಂತನೆಗಳನ್ನು, ಎಲ್ಲಾ ವಿಷಕಾರಿ ಕಳೆಗಳನ್ನು, ಎಲ್ಲಾ ದೆವ್ವ ಭೂತಗಳನ್ನು ವಿಮರ್ಶೆಗೆ ಗುರಿಪಡಿಸಲೇಬೇಕು. ಅವು ಅಡೆತಡೆಯಿಲ್ಲದಂತೆ ಹರಡುವುದಕ್ಕೆ ಎಂತಹ ಸಂದರ್ಭದಲ್ಲೂ ಅವಕಾಶ ಕೊಡಬಾರದು. ಆದಾಗ್ಯೂ ವಿಮರ್ಶೆಯು ಸಂಪೂರ್ಣ ತರ್ಕಬದ್ಧವಾಗಿಯೂ ವಿಶ್ಲೇಷಣಾತ್ಮಕವಾಗಿಯೂ ಮತ್ತು ಮನಮುಟ್ಟುವಂತೆ ಇರಬೇಕೇ ಹೊರತು ಒರಟಾಗಿ, ಅಧಿಕಾರಶಾಹಿಯಾಗಿ, ಜಡಭೌತಿಕವಾಗಿ ಅಥವಾ ಮೊಂಡು ಪಥ್ಯನಿಷ್ಠವಾಗಿ ಇರಬಾರದು.

ದೀರ್ಘಕಾಲದಿಂದ ಈವರೆಗೆ ಜನರು ಮೊಂಡು ಪಥ್ಯನಿಷ್ಠವಾದದೆಡೆಗೆ ಭಾರಿ ವಿಮರ್ಶೆಯನ್ನು ಮಾಡುತ್ತಲೇ ಇದ್ದಾರೆ. ಅದು ಹಾಗೆ ಇರಬೇಕು ಕೂಡ. ಆದರೆ ಅವರು ಪರಿಷ್ಕರಣವಾದವನ್ನು ವಿಮರ್ಶಿಸುವುದಕ್ಕೆ ಪದೇಪದೇ ನಿರ್ಲಕ್ಷ್ಯ ಮಾಡುತ್ತಾರೆ. ಮೊಂಡು ಪಥ್ಯನಿಷ್ಠವಾದ ಮತ್ತು ಪರಿಷ್ಕರಣವಾದಗಳೆರಡೂ ಮಾರ್ಕ್ಸ್‌ವಾದಕ್ಕೆ ವಿರುದ್ಧವಾಗಿರುವಂತಹವುಗಳು. ಮಾರ್ಕ್ಸ್‌ವಾದ ಖಂಡಿತವಾಗಿಯೂ ಮುನ್ನುಗ್ಗಲೇಬೇಕು. ಆಚರಣೆಯ ಬೆಳವಣಿಗೆಯ ಜೊತೆಜೊತೆಗೆ ಅದೂ ಬೆಳೆಯಬೇಕು ಹಾಗೂ ನಿಂತಲ್ಲೇ ನಿಲ್ಲಲು ಸಾಧ್ಯವಿಲ್ಲ. ಅದು ಸ್ಥಗಿತವಾಗಿ ಪಡಿಯಚ್ಚಿನಂತೆಯೇ ಉಳಿದುಕೊಂಡರೆ ನಿರ್ಜೀವವಾಗಿ ಹೋಗುತ್ತದೆ. ಹೀಗಿದ್ದರೂ ಮಾರ್ಕ್ಸ್‌ವಾದದ ಮೂಲಭೂತ ತತ್ವಗಳನ್ನು ಮಾತ್ರ ಎಂದೆಂದೂ ಉಲ್ಲಂಘಿಸಲೇಬಾರದು. ಹಾಗೆ ಮಾಡಿದರೆ ತಪ್ಪುಗಳು ಸಂಭವಿಸುತ್ತವೆ. ಮಾರ್ಕ್ಸ್‌ವಾದವನ್ನು ಜಡಭೌತಿಕವಾದಿ ದೃಷ್ಟಿಕೋನದಿಂದ ನೋಡುವುದು ಹಾಗೂ ಅದನ್ನು ಏನೋ ಒಂದು ರೀತಿಯ ಸೆಟೆದದ್ದೆಂದು ಪರಿಭಾವಿಸುವುದು ಮೊಂಡು ಪಥ್ಯನಿಷ್ಠವಾಗುತ್ತದೆ. ಮಾರ್ಕ್ಸ್‌ವಾದದ ಮೂಲಭೂತ ತತ್ವಗಳನ್ನು ಅಲ್ಲಗಳೆಯುವುದು ಮತ್ತು ಅದರ ಸಾರ್ವತ್ರಿಕ ಸತ್ಯವನ್ನು ಅಲ್ಲಗಳೆಯುವುದು ಪರಿಷ್ಕರಣವಾದವಾಗುತ್ತದೆ. ಪರಿಷ್ಕರಣವಾದವು ಬಂಡವಾಳಶಾಹಿ ಸಿದ್ಧಾಂತದ ಒಂದು ರೂಪ. ಪರಿಷ್ಕರಣವಾದಿಗಳು ಸಮಾಜವಾದ ಮತ್ತು ಬಂಡವಾಳವಾದಗಳ ನಡುವಿನ ಭಿನ್ನತೆಗಳನ್ನು, ಕಾರ್ಮಿಕ ವರ್ಗದ ಸರ್ವಾಧಿಕಾರ ಮತ್ತು ಬಂಡವಾಳಶಾಹಿ ಸರ್ವಾಧಿಕಾರಗಳ ನಡುವಿನ ಭಿನ್ನತೆಗಳನ್ನು ನಿರಾಕರಿಸುತ್ತಾರೆ. ಅವರು ಪ್ರತಿಪಾದಿಸುವುದು ವಾಸ್ತವದಲ್ಲಿ ಸಮಾಜವಾದಿ ಪಥವಲ್ಲ, ಬಂಡವಾಳಶಾಹಿ ಪಥ. ಪ್ರಸ್ತುತ ಸಂದರ್ಭಗಳಲ್ಲಿ ಮೊಂಡು ಪಥ್ಯನಿಷ್ಠವಾದಕ್ಕಿಂತಲೂ ಪರಿಷ್ಕರಣವಾದವು ಹೆಚ್ಚು ವಿನಾಶಕಾರಿಯಾಗಿದೆ. ಪರಿಷ್ಕರಣವಾದದ ಮೇಲೆ ವಿಮರ್ಶೆಯನ್ನು ಹೊರಗೆಡುವುದು ಪ್ರಸ್ತುತದ ಸೈದ್ಧಾಂತಿಕ ರಂಗದಲ್ಲಿನ ನಮ್ಮ ಮಹತ್ವಪೂರ್ಣ ಕರ್ತವ್ಯಗಳಲ್ಲಿ ಒಂದು.

ಎಂಟನೆಯದಾಗಿ ಮತ್ತು ಕೊನೆಯದಾಗಿ, ಪ್ರಾಂತಗಳ, ನಗರಸಭೆಗಳ ಮತ್ತು ಸ್ವಾಯತ್ತ ಪ್ರದೇಶಗಳ ಪಕ್ಷ ಸಮಿತಿಗಳು ಸಿದ್ಧಾಂತದ ಪ್ರಶ್ನೆಯನ್ನು ನಿಭಾಯಿಸಲೇಬೇಕು. ನಾನು ಪ್ರಸ್ತಾಪಿಸಬೇಕೆಂದು ಇಲ್ಲಿ ಉಪಸ್ಥಿತರಿರುವ ಕೆಲವು ಸಂಗಾತಿಗಳು ಬಯಸಿದ ಅಂಶವಿದು. ಅನೇಕ ಸ್ಥಳಗಳಲ್ಲಿ ಪಕ್ಷಸಮಿತಿಗಳು ಸಿದ್ಧಾಂತದ ಪ್ರಶ್ನೆಯನ್ನು ಇನ್ನೂ ನಿಭಾಯಿಸಿಲ್ಲ. ಅಥವಾ ಈ ಸಂಬಂಧ ತೀರಾ ಸ್ವಲ್ಪವನ್ನಷ್ಟೇ ಮಾಡಿವೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಅವುಗಳು ತುಂಬಾ ಬಿಡುವಿಲ್ಲದಂತೆ ಕಾರ್ಯನಿರತವಾಗಿವೆ. ಆದರೆ ಅವುಗಳು ಇದನ್ನು ನಿಭಾಯಿಸಲೇಬೇಕು. 'ಇದನ್ನು ನಿಭಾಯಿಸುವುದು' ಎಂದು ನಾನು ಹೇಳುವುದರ ಅರ್ಥ, ಇದನ್ನು ಅಜೆಂಡಾದಲ್ಲಿ ಇಟ್ಟು ಅಧ್ಯಯನ ಮಾಡಬೇಕು. ಈ ಹಿಂದಿನ ಕ್ರಾಂತಿಕಾರಿ ಅವಧಿಗಳ ಗುಣಲಕ್ಷಣಗಳಾದ ಜನಸಮೂಹಗಳ ಬೃಹತ್ ಪ್ರಮಾಣದ ಪ್ರಕ್ಷುಬ್ಧ ವರ್ಗ ಸಂಘರ್ಷಗಳು ಮುಖ್ಯವಾಗಿ ಕೊನೆಗೊಂಡಿವೆ. ಆದರೆ ವರ್ಗ ಸಂಘರ್ಷ ಇನ್ನೂ ಇದೆ - ಮುಖ್ಯವಾಗಿ ರಾಜಕೀಯ ಮತ್ತು ಸೈದ್ಧಾಂತಿಕ ಕ್ಷೇತ್ರಗಳಲ್ಲಿ - ಹಾಗೂ ಇದು ತೀಕ್ಷ್ಣವಾಗಿದೆ ಕೂಡ. ಸಿದ್ಧಾಂತದ ಪ್ರಶ್ನೆಯೀಗ ಬಹಳ ಮಹತ್ವಪೂರ್ಣವಾಗಿದೆ. ಎಲ್ಲಾ ಸ್ಥಳೀಯ ಪ್ರದೇಶಗಳ ಪಕ್ಷದ ಪ್ರಥಮ ಕಾರ್ಯದರ್ಶಿಗಳು ಖುದ್ದಾಗಿ ಈ ಪ್ರಶ್ನೆಯನ್ನು ನಿಭಾಯಿಸಬೇಕು. ಅವರು ಇದಕ್ಕೆ ಗಂಭೀರ ಗಮನ ಕೊಟ್ಟು, ಅದರ ಒಳಹೊಕ್ಕಾಗ ಮಾತ್ರವೇ ಇದನ್ನು ಸರಿಯಾಗಿ ಬಗೆಹರಿಸಬಹುದು. ಎಲ್ಲಾ ಸ್ಥಳೀಯ ಪ್ರದೇಶಗಳು ಸ್ಥಳೀಯ ಸೈದ್ಧಾಂತಿಕ ಕೆಲಸವನ್ನು ಮತ್ತು ಎಲ್ಲಾ ಸಂಬಂಧಪಟ್ಟ ಸಮಸ್ಯೆಗಳನ್ನು ಚರ್ಚಿಸುವುದಕ್ಕೆ ನಮ್ಮ ಈ ಇಂದಿನ ಸಭೆಯ ಮಾದರಿಯಲ್ಲೇ ಪ್ರಚಾರ ಕೆಲಸದ ಮೇಲೆ ಸಭೆಗಳನ್ನು ಕರೆಯಬೇಕು. ಅಂತಹ ಸಭೆಗಳಲ್ಲಿ ಕೇವಲ ಪಕ್ಷದ ಸಂಗಾತಿಗಳು ಮಾತ್ರವಲ್ಲ. ಪಕ್ಷದ ಹೊರಗಿನ ಜನರೂ, ಅಷ್ಟೇ ಅಲ್ಲ ಭಿನ್ನ ಅಭಿಪ್ರಾಯಗಳನ್ನು ಹೊಂದಿದ ಜನರೂ ಭಾಗವಹಿಸಬೇಕು. ಇಂದಿನ ಸಭೆಯು ರುಜುವಾತುಪಡಿಸಿದಂತೆ, ಇದರಿಂದ ಒಳ್ಳೆಯದೇ ಆಗುತ್ತದೆ ಯಾವುದೇ ಹಾನಿಯಾಗುವುದಿಲ್ಲ.

### ಟಿಪ್ಪಣಿಗಳು

1. ಪ್ರಚಾರ ಕೆಲಸ ಕುರಿತಾದ ಚೀನಾ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಸಮ್ಮೇಳನವನ್ನು ಪಕ್ಷದ ಕೇಂದ್ರ ಸಮಿತಿಯು 1957ರ ಮಾರ್ಚ್ 6ರಿಂದ 13ರವರೆಗೆ ಪೀಕಿಂಗ್‌ನಲ್ಲಿ ನಡೆಸಿತು. ಇದರಲ್ಲಿ ಕೇಂದ್ರ ಮತ್ತು ಪ್ರಾಂತೀಯ (ಅಥವಾ ನಗರ) ಮಟ್ಟದ ಪಕ್ಷದ ಪ್ರಚಾರ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಇಲಾಖೆಗಳ 380ಕ್ಕೂ ಹೆಚ್ಚು ಪ್ರಮುಖ ಕಾರ್ಯಕರ್ತರು ಭಾಗವಹಿಸಿದ್ದರು. ಅಲ್ಲದೇ, ವಿಜ್ಞಾನ, ಶಿಕ್ಷಣ, ಸಾಹಿತ್ಯ ಮತ್ತು ಕಲೆ ಹಾಗೂ ಪ್ರಕಾಶನ ಇಲಾಖೆ ಮತ್ತು ಸಂಸ್ಥೆಗಳಿಂದ 100ಕ್ಕೂ ಹೆಚ್ಚು ಪಕ್ಷೇತರ ಜನರನ್ನೂ ಆಹ್ವಾನಿಸಲಾಗಿತ್ತು.

2. ವ್ಯಕ್ತಿನಿಷ್ಠವಾದ, ಸಂಕುಚಿತವಾದ ಮತ್ತು ಪಡಿಯಚ್ಚಿನ ಬರವಣಿಗೆಗಳೊಂದಿಗೆ ಹೋರಾಡುವುದಕ್ಕಾಗಿ ಪಕ್ಷ ಸಂಘಟನೆಗಳಲ್ಲಿ ಬೃಹತ್ ಪ್ರಮಾಣದ ತಿದ್ದುಪಡಿ ಆಂದೋಲನವನ್ನು ಜಪಾನ್ ವಿರೋಧಿ ಯುದ್ಧದ ಅವಧಿಯಲ್ಲಿ 1942ರಲ್ಲಿ ಯೆನಾನ್ ಮತ್ತು ಇತರ ಜಪಾನ್ ವಿರೋಧಿ ಸ್ಥಾವರ ಪ್ರದೇಶಗಳಲ್ಲಿ ನಡೆಸಲಾಯಿತು. ವಿಮೋಚನಾ ಯುದ್ಧ ಅವಧಿಯಲ್ಲಿನ ತಿದ್ದುಪಡಿಯು ಪಕ್ಷ ಸದೃಢೀಕರಣಕ್ಕಾಗಿ ನಡೆಸಿದ ಒಂದು ಆಂದೋಲನವಾಗಿದ್ದು ಇದನ್ನು 1948ರಲ್ಲಿ ಭೂಸುದಾರಣಾ ಆಂದೋಲನದ ಸಮನ್ವಯದೊಂದಿಗೆ ವಿಮುಕ್ತ ಪ್ರದೇಶಗಳಲ್ಲಿನ ಪಕ್ಷ ಸಂಘಟನೆಗಳಲ್ಲಿ ಬಹುವ್ಯಾಪಕವಾಗಿ ನಡೆಸಲಾಯಿತು. ಚೀನಾ ಜನತಾ ಗಣರಾಜ್ಯ ಸ್ಥಾಪನೆಯಾದ ಆರಂಭಿಕ ದಿನಗಳಲ್ಲಿನ ತಿದ್ದುಪಡಿಯನ್ನು, ಬೃಹತ್ ಸಂಖ್ಯೆಯ ಹೊಸ ಪಕ್ಷ ಸದಸ್ಯರ ನಡುವೆ ಶಿಕ್ಷಣವನ್ನು ತೀವ್ರಗೊಳಿಸಿ ಅವರ ಕಶ್ಮಲ ಸಿದ್ಧಾಂತವನ್ನು ಬದಲಿಸುವ ಹಾಗೂ ವಿಜಯದ ಪರಿಣಾಮವಾಗಿ ಹಳೆಯ ಸದಸ್ಯರ ನಡುವೆ ಬೆಳೆಯಲಾರಂಭಿಸಿದ ಸ್ವಸಂತೃಪ್ತಿ ಮತ್ತು ಆಜ್ಞಾಪನಾ ಕಾರ್ಯಶೈಲಿಗಳನ್ನು ಜಯಿಸುವ ಗುರಿಯೊಂದಿಗೆ 1950ರಲ್ಲಿ ರಾಷ್ಟ್ರವ್ಯಾಪಿ ವಿಜಯದ ನಂತರ ಇಡೀ ಪಕ್ಷದಾದ್ಯಂತ ನಡೆಸಲಾಯಿತು.

3. ನೋಡಿ: 'ತನ್ನ ಸ್ವಂತ ಪೋಷಣೆಗಾಗಿ ಸೈನ್ಯದಿಂದ ಉತ್ಪಾದನೆಯ ಕುರಿತು ಹಾಗೂ ತಿದ್ದುಪಡಿಗಾಗಿ ಮತ್ತು ಉತ್ಪಾದನೆಗಾಗಿ ಮಹಾನ್ ಆಂದೋಲನಗಳ ಮಹತ್ವ ಕುರಿತು'. ಮಾವೋ ತ್ಸೆ ತುಂಗ್ ಸಂಗ್ರಹಿತ ಕೃತಿಗಳು. ಇಂಗ್ಲೀಷ್ ಆವೃತ್ತಿ, ಫಾರಿನ್ ಲಾಂಗ್ವೇಜ್ ಪ್ರೆಸ್, ಪೀಕಿಂಗ್ , 1967, ಸಂಪುಟ 111, ಪುಟ 275-79.